ಸಂಪುಟ 01 । ಸಂಚಿಕೆ 92 । ಮಂಗಳವಾರ 17 ಫೆಬ್ರವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ತಾಜ್ ಮಹೋತ್ಸವ**

ಪ್ರತಿ ವರ್ಷ ಫೆಬ್ರವರಿ 17 ರಂದು, ಆಗ್ರಾದಲ್ಲಿ ತಾಜ್ ಮಹೋತ್ಸವ ಅಥವಾ ತಾಜ್ ಉತ್ಸವವನ್ನು ಆಚರಿಸಲಾಗುತ್ತದೆ, ಇದು ನಮ್ಮ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಬಹಿರಂಗಪಡಿಸುತ್ತದೆ. 2025 ರಲ್ಲಿ ಈ ಉತ್ಸವವು ಫೆಬ್ರವರಿ 17 ರಂದು ಪ್ರಾರಂಭವಾಗಿ ಫೆಬ್ರವರಿ 27 ರವರೆಗೆ ನಡೆಯಲಿದೆ. ನಿಸ್ಸಂದೇಹವಾಗಿ, ತಾಜ್ ಮಹಲ್ ಮೊಘಲ್ ಯುಗದ ವೈಭವವನ್ನು ಪ್ರತಿನಿಧಿಸುತ್ತದೆ ಮತ್ತು ಭಾರತೀಯ ಕರಕುಶಲತೆಯ ಅತ್ಯುತ್ತಮ ಮಾದರಿಗಳನ್ನು ಪ್ರದರ್ಶಿಸುತ್ತದೆ.

**2) ಯಾದೃಚ್ಛಿಕ ದಯೆಯ ದಿನ (Random Acts of Kindness Day)**

ಈ ದಿನವನ್ನು ವಿಶ್ವದಾದ್ಯಂತ ಮಾನವೀಯತೆ, ಸಹಾನುಭೂತಿ ಮತ್ತು ದಯೆಯ ಮನೋಭಾವವನ್ನು ಬೆಳೆಸಲು ಆಚ-

## ಸುಭಾಷಿತ

ನೂರು ಮರ! ನೂರು ಸ್ವರ
ಒಂದೊಂದು ಅತಿ ಮಧುರ
ಬಂಧವಿರದೆ ಬಂಧುರ ಸ್ವಚ್ಛಂದ
ಸುಂದರ

ದ.ರಾ.ಬೇಂದ್ರೆ

## ಪುಲ್ವಾಮಾ ಘೋರ ದುಷ್ಕೃತ್ಯದಲ್ಲಿ ಸಿಆರ್‌ಪಿಎಫ್ ಯೋಧರ ಬಲಿದಾನ: ನಮನ

ನೈಜ್ಯ ದೇಸೆ ನ್ಯೂಸ್

ಲಿಂಗಸಗೂರು: ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಲೆಥಾಪೋರಾ ಎಂಬಲ್ಲಿ 2019 ರ ಫೆ.14 ರಂದು ಆತ್ಮಹತ್ಯಾ ಬಾಂಬರ್ ಎರಗಿದ ಘೋರ ದುಷ್ಕೃತ್ಯದಲ್ಲಿ 40 ಜನ ಭಾರತೀಯ ಯೋಧರು ಹುತಾತ್ಮರಾಗಿದ್ದರು. ಆ ಎಲ್ಲ ಯೋಧರ ಬಲಿದಾನವನ್ನು ಗೌರವಿಸಿ ದೇಶಾದ್ಯಂತ ನಮನ ಸಲ್ಲಿಸಲಾಯಿತು.



ಅದರಂತೆ ಪಟ್ಟಣದ ಬಸ್ ನಿಲ್ದಾಣ ವೃತ್ತದಲ್ಲಿ ಮಾಜಿ ಸೈನಿಕರ ಸಂಘದ ನೇತೃತ್ವದಲ್ಲಿ ಮಾಜಿ ಸೈನಿಕರು ಹಾಗೂ ಶಾಸಕ ಮಾನಪ್ಪ ವಜ್ಜಲ್ ಸೇರಿದಂತೆ ಅನೇಕ ಮುಖಂಡರು ಕ್ಯಾಂಡಲ್ ಹಿಡಿದು ನಮನ ಸಲ್ಲಿಸಿದರು. ಬಳಿಕ ಗಡಿಯಾರ ವೃತ್ತದವರೆಗೆ ತೆರಳಿ ಅಲ್ಲಿಯೂ ಕ್ಯಾಂಡಲ್ ಹಚ್ಚಿ ನಮನ ಸಲ್ಲಿಸಿದರು.

## ಭಾರತದ ವಿರುದ್ಧ ಪಾಕಿಗಳ ಹೀನಾಯ ಸೋಲು

# ಬಾಬರ್ ಅಜಮ್ ಫುಲ್ ಟ್ರೋಲ್

**ಕರಾಚಿ: ಕಳೆದ ರಾತ್ರಿ ಕೊಲಂಬೊದಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ಪಾಕಿಸ್ತಾನ ತಂಡ ಭಾರತದ ವಿರುದ್ಧ ಸೋಲಿನ ನಂತರ ಕಳಪೆ ಪ್ರದರ್ಶನ ನೀಡುತ್ತಿರುವ ಬ್ಯಾಟಿಂಗ್ ತಾರೆ ಬಾಬರ್ ಅಜಮ್ ಅವರನ್ನು ಮಾಜಿ ಆಟಗಾರರು ಟೀಕಾ ಪ್ರಹಾರ ಮಾಡಿದ್ದಾರೆ. ದೇಶದ ಹಲವಾರು ಮಾಜಿ ಆಟಗಾರರು ಅವರನ್ನು ತಂಡದಿಂದ ವಜಾಗೊಳಿಸುವಂತೆ ಒತ್ತಾಯಿಸಿದ್ದಾರೆ.**

ಪಂದ್ಯದಲ್ಲಿ ಪಾಕ್ ತಂಡದ ಮಾಜಿ ನಾಯಕ ಬಾಬರ್, ಹಿರಿಯ ಸ್ಪಿನ್ನರ್ ಶದಾಬ್ ಖಾನ್ ಮತ್ತು ವೇಗಿ ಶಹೀನ್ ಶಾ ಅಫ್ರಿದಿ ಉತ್ತಮ ಪ್ರದರ್ಶನ ನೀಡಲಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ. ನನ್ನ ಕೈಯಲ್ಲಿದ್ದರೆ, ನಾನು ಬಾಬರ್, ಶದಾಬ್ ಮತ್ತು ಶಹೀನ್ ಅವರನ್ನು ಮತ್ತೆ ಟಿ20 ತಂಡಕ್ಕೆ ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ. ಅವರಿಗೆ ಪಾಕಿಸ್ತಾನ ಪರ ಆಡಲು ಸಾಕಷ್ಟು ಅವಕಾಶಗಳಿದ್ದವು ಆದರೆ ನಿನ್ನೆ ಮತ್ತೆ ವಿಫಲವಾಗಿದ್ದಾರೆ. ಯುವ ಆಟಗಾರರನ್ನು ಸಜ್ಜುಗೊಳಿಸುವ ಸಮಯ ಬಂದಿದೆ ಎಂದು ಮಾಜಿ ನಾಯಕ ಶಾಹಿದ್ ಅಫ್ರಿದಿ ಹೇಳಿದ್ದಾರೆ.ಮಾಜಿ ನಾಯಕ ಮತ್ತು ಪಾಕ್ ಕ್ರಿಕೆಟ್ ದಿಗ್ಗಜ ಜಾವೇದ್ ಮಿಯಾಂದಾದ್ ಪಾಕಿಸ್ತಾನ ಕ್ರಿಕೆಟ್ ತಂಡವು ಒತ್ತಡಕ್ಕೆ ಒಳಗಾದಾಗ ಹೋರಾಡಲು ಸಾಧ್ಯವಾಗಲಿಲ್ಲ ಎಂದು ಒಪ್ಪಿಕೊಂಡರು.




ಬಾಬರ್ ಅವರನ್ನು ಯಾವಾಗಲೂ ಬೆಂಬಲಿಸುವ ಮತ್ತೊಬ್ಬ ಮಾಜಿ ನಾಯಕ ಮೊಹಮದ್ ಯೂಸಫ್, ಈ ಸೋಲು ಬಾಬರ್ ಮತ್ತು ಶಾಹೀನ್ ಅವರ ಟಿ 20 ವೃತ್ತಿಜೀವನವನ್ನು ಕೊನೆಗೊಳಿಸಬೇಕು ಎಂದು ಹೇಳಿದರು. ಶಾಹೀನ್, ಬಾಬರ್ ಮತ್ತು ಶಾದಾಬ್‌ಗೆ ಸಮಯ ಬಂದಿದೆ, ಪಾಕಿಸ್ತಾನದ ಟಿ 20 ತಂಡಕ್ಕೆ ಹೊಸ ಪ್ರದರ್ಶನ ನೀಡುವವರ ಅಗತ್ಯವಿದೆ, ದುರ್ಬಲ ತಂಡಗಳ ವಿರುದ್ಧ ಖಾಲಿ ಗೆಲುವುಗಳಲ್ಲ ಎಂದು ಯೂಸಫ್ ಎಕ್?ಸನಲ್ಲಿ ಪೋಸ್ಟ್ ಮಾಡಿದ್ದಾರೆ.ಮಾಜಿ ವೇಗಿ ಶೋಯೆಬ್ ಅಖ್ತರ್ ಮಾತನಾಡುತ್ತಾ, ಬಾಬರ್ ಅವರ ಸೂಪರ್‌ಸ್ಟಾರ್ ಸ್ಥಾನಮಾನವನ್ನು ಇಲ್ಲಿ ಅಣಕಿಸಿದ್ದಾರೆ. ನೀವು ಒಂದು ಪಂದ್ಯವನ್ನು ಗೆಲ್ಲಲು ಸಾಧ್ಯವಾಗದ ಆಟಗಾರನನ್ನು ಸೂಪರ್‌ಸ್ಟಾರ್ ಮಾಡಿದ್ದೀರಿ ಎಂದು ಅವರು ಹೇಳಿದರು. ನಾವು ಒಂದು ಹಂತದಲ್ಲಿ ಭಾರತದೊಂದಿಗೆ ಹೋರಾಡಿದ್ದರೂ, ಇಂದು ಅವರನ್ನು ಸೋಲಿಸುವ ಕನಸು ಕೂಡ ನಮಗೆ ಕಾಣುತ್ತಿಲ್ಲ ಎಂದು ಅವರು ಹೇಳಿದರು.

ಬಾಬರ್ ಪಾಕಿಸ್ತಾನ ಪರ ತಮ ಕೊನೆಯ ಪಂದ್ಯವನ್ನು ಆಡಿದ್ದಾರೆಂದು ಭಾವಿಸಿದ್ದೇನೆ ಎಂದು ಅಹದ್ ಶೆಹಜಾದ್ ಟೀಕಿಸಿದ್ದಾರೆ.ಬಾಬರ್ ಮತ್ತೊಮೆ ಹೋಗಿದ್ದಾರೆ. ಬಹುಶಃ ಈ ಸ್ವರೂಪದಲ್ಲಿ ತನ್ನ ಯೋಗ್ಯತೆಯನ್ನು ಸಾಬೀತುಪಡಿಸಲು ಇದು ಅವರ ಕೊನೆಯ ನೃತ್ಯವಾಗಿರಬಹುದು ಎಂದು ಶೆಹಜಾದ್ ಎಕ್ಸ್ ನಲ್ಲಿ ಬರೆದಿದ್ದಾರೆ. ಈ ಸೋಲು ಪಾಕಿಸ್ತಾನ ಕ್ರಿಕೆಟ್ ಸಮುದಾಯವನ್ನು ನಿರಾಶೆಗೊಳಿಸಿದೆ, ಹಲವಾರು ಸಾಮಾಜಿಕ ಮಾಧ್ಯಮ ಬಳಕೆದಾರರು ಸಹ ಪಾಕಿಸ್ತಾನ ಸರ್ಕಾರವು ಬಾಂಗ್ಲಾದೇಶವನ್ನು ಬೆಂಬಲಿಸಿ ಬಹಿಷ್ಕಾರದ ಕರೆಗೆ ಬದ್ಧವಾಗಿರಬೇಕಿತ್ತು ಎಂದು ಹೇಳುವ ಮೂಲಕ ತಂಡವನ್ನು ಅಪಹಾಸ್ಯ ಮಾಡಿದ್ದಾರೆ.

ನಾವು ಬಹಿಷ್ಕಾರವನ್ನು ಮುಂದುವರಿಸಿದ್ದರೆ ಉತ್ತಮವಾಗುತ್ತಿತ್ತು ಎಂದು ಹಲವಾರು ಇಲ್ಲಿ ಪೋಸ್ಟ್ ಮಾಡಿವೆ.ಭಾರತವು ಯಾವುದೇ ಸ್ವರೂಪದಲ್ಲಿ ಪಾಕಿಸ್ತಾನಕ್ಕಿಂತ ಹೆಚ್ಚು ಶ್ರೇಷ್ಠ ತಂಡವಾಗಿದೆ ಎಂದು ಒಪ್ಪಿಕೊಳ್ಳುವ ಸಮಯ ಇದಾಗಿರಬಹುದು ಎಂದು ಮಾಜಿ ನಾಯಕ ಮೊಯಿನ್ ಖಾನ್ ಹೇಳಿದ್ದಾರೆ. ಈ ಬಾರಿ ನಾವು ಮತ್ತೆ ನಮ ಭರವಸೆಯನ್ನು ಹುಟ್ಟುಹಾಕಿದ್ದೇವೆ ಆದರೆ ವೃತ್ತಿಪರ ಕ್ರಿಕೆಟಿಗನಾಗಿ ಭಾರತೀಯ ಆಟಗಾರರು ಅತ್ಯಂತ ಮುಖ್ಯವಾದಾಗ ಅದನ್ನು ಸಾಧಿಸುತ್ತಾರೆ ಎಂಬ ಭಾವನೆ ಯಾವಾಗಲೂ ಇತ್ತು ಎಂದು ಮೊಯಿನ್ ಹೇಳಿದರು.ಪಾಕಿಸ್ತಾನವು ಶಾಹೀನ್ ಶಾ ಅಫ್ರಿದಿ ಎಂಬ ಒಬ್ಬ ಪೇಸ್ ಬೌಲರ್‌ನೊಂದಿಗೆ ಹೋಗುವುದನ್ನು ನೋಡಿ ಆಶ್ಚರ್ಯವಾಯಿತು ಎಂದು ಮಿಯಾಂದಾದ್ ಹೇಳಿದರು.

## ನಿಂತಲ್ಲೇ ನಿಂತು ತುಕ್ಕು ಹಿಡಿತ್ತಿರುವ ಎಕಲಾರ ಗ್ರಾಂ.ಪಂ.ಕಸ ವಿಲೇವಾರಿ ವಾಹನ




ನೈಜ್ಯ ದೇಸೆ ನ್ಯೂಸ್

**ಔರಾದ: ಸರ್ಕಾರ ಗ್ರಾಮೀಣ ಭಾಗದಲ್ಲಿ ಸ್ವಚ್ಛತೆ ಕಾಪಾಡುವ ಉದ್ದೇಶದಿಂದ ಸ್ವಚ್ಛ ಭಾರತ ಯೋಜನೆಯಡಿ ಪ್ರತಿ ಪಂಚಾಯಿತಿಗೆ ಕಸ ಸಂಗ್ರಹಣೆ ಮಾಡಲು ವಾಹನದ ವ್ಯವಸ್ಥೆ ಕಲ್ಪಿಸಿದೆ. ಆದರೆ. ಔರಾದ ತಾಲೂಕಿನ ಎಕಲಾರ ಗ್ರಾಮ ಪಂಚಾಯಿತಿಗೆ ವಿತರಿಸಿದ ವಾಹನ ಬಳಕೆಯಾಗದೆ.**

ನಿಂತಲ್ಲೇ ನಿಂತು ಹಾಳಾಗುತ್ತಿದೆ. ಎಕಲಾರ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಾದ ಎಕಲಾರ. ಕೊಳ್ಳೂರ. ಬರದಾಪೂರ. ತುಳಜಾಪುರ. ಬೋರಾಳ. ಗ್ರಾಮಗಳ ಜನರಿಗೆ ಅರ್ಧದಷ್ಟು . ಮನೆಗಳಿಗೆ ಮಾತ್ರ ಸುಮಾರು ಒಂದು ವರ್ಷಗಳ ಹಿಂದೆ ಹಸಿ ಕಸ. ಒಣ ಕಸದ. ಬಕೆಟ್ ವಿತರಿಸಲಾಗಿದೆ. ಆದರೆ ವಾಹನ ಗ್ರಾಮಗಳಲ್ಲಿ ಸಂಚರಿಸಿ ಕಸ ಸಂಗ್ರಹಣೆ ಮಾಡದೆ ಇರುವುದರಿಂದ ಕಸವನ್ನು ಬೀದಿಗೆ ಹಾಕುತ್ತಿದ್ದಾರೆ ಅದು ಕೊಳೆತು ಗಬ್ಬು ನಾರುತ್ತಿದೆ ಇದರಿಂದ ಗ್ರಾಮಗಳಲ್ಲಿ ಸಾರ್ವಜನಿಕರು ರೋಗ ಹರಡುವ ಭೀತಿಯಲ್ಲಿದ್ದವೆಂದು ಸಾರ್ವಜನಿಕರು ತಿಳಿಸಿದರು ಇದು ಸರ್ಕಾರದ ದುಡ್ಡು ಲಪಾಟಾಸುವ ಯೋಜನೆ ಇದ್ದಂತಾಗಿದೆ.

ಗ್ರಾಂ. ಪಂ. ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಕಸ ಸಂಗ್ರಹಣೆ ಯೋಜನೆ ವಿಫಲವಾಗಿದೆ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸುತ್ತಿದರು ಒಂದು ವರ್ಷಕ್ಕಿಂತ ಮೇಲ್ಪಟ್ಟು ನಿಂತಲ್ಲೆ ನಿಂತು ವಾಹನ ಕೆಟ್ಟು ಹೋಗುತ್ತಿದೆ ಇದು ಅಧಿಕಾರಿಗಳ ನಿರ್ಲಕ್ಷವೆ ಎಂದು ಸಾರ್ವಜನಿಕರು ಅಕ್ರೋಶ ವ್ಯಕ್ತಪಡಿಸಿದರು.

## ಪಾಲಿಶ್ ನೆಪದಲ್ಲಿ ಐದು ತೊಲೆ ಚಿನ್ನ ದೋಚಿದ ಕಳ್ಳರು

ನೈಜ್ಯ ದೇಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಎಸ್ ಬಿ ಎಚ್ ಕಾಲೋನಿಯಲ್ಲಿ ಶುಕ್ರವಾರ ನಡೆದ ಘಟನೆ ಸಾರ್ವ ಜನಿಕರಲ್ಲಿ ಆತಂಕ ಹುಟ್ಟಿಸಿದೆ. ಉಚಿತವಾಗಿ ಚಿನ್ನಾ ಭರಣ ಪಾಲಿಶ್ ಮಾಡಿಕೊಡುವುದಾಗಿ ನಂಬಿಸಿ ಇಬ್ಬರು ಅಪರಿಚಿತರು ಮಹಿಳೆಯೊಬ್ಬರ ಬಳಿಯಿದ್ದ ಸುಮಾರು ಐದು ತೊಲೆ ತೂಕದ ನಾಲ್ಕು ಚಿನ್ನದ ಬಳೆಗಳನ್ನು ಕಳವು ಮಾಡಿರುವ ಘಟನೆ ಬೆಳಕಿಗೆ ಬಂದಿದೆ.**



ಆಶಾದೇವಿ ಎಂಬ ಮಹಿಳೆ ತಮ್ಮ ಮನೆಯಲ್ಲಿ ಒಬ್ಬರೇ ಇದ್ದ ವೇಳೆ ಇಬ್ಬರು ವ್ಯಕ್ತಿಗಳು ಮನೆಗೆ ಬಂದು ಚಿನ್ನಾಭರಣವನ್ನು ಉಚಿತವಾಗಿ ಸ್ವಚ್ಛಗೊಳಿಸಿ ಹೊಸದಾಗಿ ಮಿನುಗುವಂತೆ ಮಾಡಿಕೊಡುವುದಾಗಿ ತಿಳಿಸಿದರು. ಅವರ ಮಾತಿಗೆ ನಂಬಿಕೆ ಇಟ್ಟ ಮಹಿಳೆ ಕೈಯಲ್ಲಿದ್ದ ನಾಲ್ಕು ಚಿನ್ನದ ಬಳೆಗಳನ್ನು ಪಾಲಿಶ್ ಮಾಡಲು ನೀಡಿದರು.

ಮನೆಯಲ್ಲೇ ಪಾತ್ರೆ ಯಲ್ಲಿ ನೀರು ಕಾಯಿಸಿ, ಗ್ಯಾಸ್ ಒಲೆಯ ಮೇಲೆ ಬಳೆಗ ಳನ್ನು ಹಾಕಿ 15 ನಿಮಿಷಗಳಲ್ಲಿ ಸ್ವಚ್ಛ ಗೊಳಿಸುತ್ತೇವೆ ಎಂದು ಹೇಳಿ ಮಹಿಳೆಯ ಗಮನವನ್ನು ಬೇರೆಡೆ ಸೆಳೆದರು. ಈ ವೇಳೆ ಕುಶಲತೆಯಿಂದ ಚಿನ್ನದ ಬಳೆಗಳನ್ನು ತೆಗೆದುಕೊಂಡು ಸ್ಥಳದಿಂದ ಪರಾರಿಯಾದರು ಎನ್ನ ಲಾಗಿದೆ. ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕಾರಣವನ್ನು ದಾಖಲಿಸಿ ಕೊಂಡಿದ್ದಾರೆ .

## ರಬಕವಿ ನಗರದಲ್ಲಿ ಶಿವನಿಗೆ ಭಕ್ತಿ ಅರ್ಪಿಸಿ ಮಹಾಶಿವರಾತ್ರಿ ಆಚರಣೆ.

ನೈಜ್ಯ ದೇಸೆ ನ್ಯೂಸ್

**ರಬಕವಿ ಬನಹಟ್ಟಿಯ: ರಬಕವಿ ನಗರದ ಹಿಂದೂ ರುದ್ರಭೂಮಿಯಲ್ಲಿ ಮಹಾ ಶಿವರಾತ್ರಿ ನಿಮಿತ್ಯ ಹಮ್ಮಿಕೊಂಡಿದ್ದ ಶಿವನಿ ಮೂತಿ9ಗೆ ಪೂಜೆ ಪುಷ್ಪ ನಮನ ಸಲ್ಲಿಸಿದ ಪರಮ ಪೂಜ್ಯ ಶ್ರೀ ಗಳು ಮತ್ತು ಶ್ರೀ ಸಿದ್ದು ಕೊಣ್ಣೂರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.**

ದೇಶಾದಂತಹ ಶಿವನಿಗೆ ವಿಶೇಷ ಪೂಜೆ ಭಜನೆ ನೆರೆವೆರುತ್ತದೆ. ಶಿವರಾತ್ರಿ ಈ ದಿನದಂದು ಕೈಲಾಸ ವಾಸ ಪರಶಿವನನ್ನು ಕೋಟಿ ಕೋಟಿ ಜನರು ಭಜಿಸುತ್ತಾರೆ. ತನ್ನ ನಂಬಿ ಬಂದ ಭಕ್ತರಿಗೆ ಇಷ್ಟಾಥ-'ಗಳಿಗೆ ಎಂದಿಗೂ ನಿರಾಸೆ ಮಾಡುವದಿಲ್ಲ ಎಂದು ಪರಮ ಪೂಜ್ಯ ಶ್ರೀ ಗುರುಸಿದ್ದೇಶ್ವರ ಮಹಾಸ್ವಾಮಿಗಳು. ಹೇಳಿದರು.



ಶ್ರೀ ಸಿದ್ದು ಕೊಣ್ಣೂರ ಪ್ರಭು ಉಮದಿ ಸಂಗಮೇಶ ಪತಪಾಕಿ ಸಂಜಯ ತೆಗ್ಗಿ ಮಾರುತಿ ನಾಯಕ ಸಂಜಯ ತೆಲಿ ಸೋಮಶೇಖರ ಕೊಟ್ರಶೆಟ್ಟಿ ಜಿ ಎಚ್ ಚಿತ್ತರಗಿ ಸಂಜಯ ಜೋತಾವರ ಈಶ್ವರ ನಾಗರಾಳ ಈರಣ್ಣ ಗುಣಕಿ ಚಿದಾನಂದ ಸೊಲ್ಲಾಪುರ ದೀಪಾಲಿ .ಡಂಗಿ ಕವಿತಾ ಕೊಣ್ಣೂರ ಸಂಗಮೇಶ ಮಡಿವಾಳರ ಮತ್ತು ಮುಖಂಡರ ಹಿರಿಯರು ಯುವಕರು ತಾಯಂದಿರು ಭಕ್ತರು ಹಾಜರಿದ್ದರು.

# ಬಿಎಸ್‌ಎಫ್ ಸೇರಿದ ಕಾಶಿಬಾಯಿ ಚಲವಾದಿಗೆ ಸನ್ಮಾನ

ನೈಜ್ಯ ದೇಸೆ ನ್ಯೂಸ್

**ಮುದ್ದೇಬಿಹಾಳ: ದೇಶಸೇವೆಯ ಸಂಕಲ್ಪ ಮತ್ತು ಧೈರ್ಯದಿಂದ :ಠಡಿಜಜಡಿ ಖಜಛಿಣಡು-ಣಥಿ ಈಠಡಿಛಿಜ (ಬಿಎಸ್‌ಎಫ್)ಗೆ ಸೇರುವ ಕನಸನ್ನು ನನಸು ಮಾಡಿಕೊಂಡಿರುವ ಯುವತಿಯರ ಸಂಖ್ಯೆ ಹೆಚ್ಚುತ್ತಿರುವುದು ಸಮಾಜಕ್ಕೆ ಹೆಮ್ಮೆಯ ಸಂಗತಿಯಾಗಿದೆ. ಕಡುಬಡತನದ ಹಿನ್ನೆಲೆಯ ದಲಿತ ಕುಟುಂಬದ ಪುತ್ರಿಯಾಗಿರುವ ಕಾಶಿಬಾಯಿ ಚಲವಾದಿ ಅವರು ದೇಶ ಸೇವೆಗೆ ತಾವು ಸಿದ್ಧರಾಗಿರುವುದನ್ನು ಭಾವನಾತ್ಮಕವಾಗಿ ವ್ಯಕ್ತಪಡಿಸಿದರು.**

ತಾಲೂಕಿನ ಮುದ್ದೇಬಿಹಾಳ ಪಟ್ಟಣದಲ್ಲಿ ಕಾರ್ಗಿಲ್ ವೀರಯೋಧರ ಸ್ಮಾರಕ ಸಮಿತಿಯಿಂದ ಆಯೋಜಿಸಲಾದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, "ಭಾರತದ ಧ್ವಜ ಹಿಡಿದು ಶತ್ರು ಸಂಹಾರ ಮಾಡ್ತೀನಿ, ಇಲ್ಲಾಂದ್ರೆ ರಾಷ್ಟ್ರಧ್ವಜವನ್ನು



ಮೈಮೇಲೆ ಹೊದ್ಕೊಂಡೇ ಮರಳಿ ಬರ್ತೀನಿ" ಎಂಬ ತಮ್ಮ ದೇಶಭಕ್ತಿಯ ಸಂಕಲ್ಪವನ್ನು ಹಂಚಿಕೊಂಡರು. ತಾವು ಅತಿ ಹಿಂದುಳಿದ ದಲಿತ ಕುಟುಂಬದಲ್ಲಿ ಜನಿಸಿ, ಪ್ರಥಮ ತರಗತಿಯಿಂದ ಪದವಿ ಶಿಕ್ಷಣದವರೆಗೆ ಸರ್ಕಾರಿ ಶಾಲೆಗಳಲ್ಲೇ ಓದಿದ್ದಾಗಿ ಹೇಳಿದರು. ಕುಟುಂಬದವರು ಸರ್ಕಾರಿ ನೌಕರಿ ಮಾಡುವಂತೆ ಬಯಸಿದರೂ, ದೇಶಸೇವೆಯೇ ತಮ್ಮ ಜೀವನದ ಗುರಿಯಾಗಿದೆ ಎಂದು ಅವರು ತಿಳಿಸಿದರು. ಸೈನ್ಯಕ್ಕೆ ಸೇರುವ ನಿರ್ಧಾರ ತಿಳಿಸಿದಾಗ ತಾಯಿ ಆತಂಕ ವ್ಯಕ್ತಪಡಿಸಿದರೂ, ದೇಶದ ಗಡಿಯಲ್ಲಿ ಸೇವೆ ಸಲ್ಲಿಸುವ ವಿಶ್ವಾಸವನ್ನು ನೀಡಿದ್ದಾಗಿ ಅವರು ಸ್ಮರಿಸಿದರು.

ಸಮಾರಂಭದಲ್ಲಿ ಆಶೀರ್ವಚನ ನೀಡಿದ ವೇದಮೂರ್ತಿ ಮಹಾದೇವಯ್ಯ ಶಾಸ್ತ್ರಿಗಳು, ಸೈನಿಕರು ತಮ್ಮ ವೈಯಕ್ತಿಕ ಬದುಕನ್ನು ತ್ಯಜಿಸಿ ದೇಶದ ಜನರ ಸುರಕ್ಷತೆಗೆ ಗಡಿಯಲ್ಲಿ ಸೇವೆ ಸಲ್ಲಿಸುತ್ತಾರೆ ಎಂದು ಹೇಳಿದರು. ಸೈನಿಕರ ಕುಟುಂಬ ಸದಸ್ಯರನ್ನು ಸಮಾಜ ಅತ್ಯಂತ ಗೌರವದಿಂದ ಕಾಣಬೇಕೆಂದು ಅವರು ಕರೆ ನೀಡಿದರು. ಪ್ರಾಸ್ತಾವಿಕವಾಗಿ ಪುನೀತ ಹಿಪ್ಪರಗಿ ಮಾತನಾಡಿದರು. ಬಸವರಾಜ ನಂದಿಕೇಶ್ವರಮಠ, ಸಾಹಿತಿ ಶಿವಪುತ್ರ ಅಜಮನಿ, ಪತ್ರಕರ್ತ ಪರಶುರಾಮ ಕೊಣ್ಣೂರ ಹಾಗೂ ಮಾಜಿ ಸೈನಿಕ ರೇವಣೆಪ್ಪ ಹರಿಜನ ತಮ್ಮ ಅಭಿಪ್ರಾಯಗಳನ್ನುಹಂಚಿಕೊಂಡರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಕಾಂತ ಹಿರೇಮಠ ವಹಿಸಿದ್ದರು. ರಾಜು ಮ್ಯಾಗೇರಿ ವಂದನಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಮಹಾಂತೇಶ ಬೂದಿಹಾಳಮಠ, ಚಂದ್ರು ಕಲಾಲ, ಶೇಖರ ಢವಳಗಿ, ರಾಜು ಬಳ್ಳೊಳ್ಳಿ, ಕಾಶಿನಾಥ ಹುಗ್ಗಿ,

ಸಂತೋಷ ಬಾದರಬಂಡಿ, ವರ್ತಕರಾದ ಮಾಣಿಕಚಂದ ದಂಡಾವತಿ, ಹುಲ್ಲೂರು ಗ್ರಾಮದ ಭೀಮನಗೌಡ ಬಿರಾದಾರ, ನಬೀಸಾಬ ಕಂಬಾರ, ತಾಲೂಕು ಪಿಂಜಾರ ಸಮಾಜದ ಅಧ್ಯಕ್ಷ ಎಂ.ಡಿ. ನದಾಫ್ ಅಮರಗೋಳ, ಮುತ್ತು ಚಲವಾದಿ ಸೇರಿದಂತೆ ಕಾಶಿಬಾಯಿ ಚಲವಾದಿಯವರ ಕುಟುಂಬ ಸದಸ್ಯರು ಉಪಸ್ಥಿತರಿದ್ದರು. ದೇಶದ ಗಡಿಯನ್ನು ಕಾಯುವ ಸೌಭಾಗ್ಯ ಸಿಕ್ಕಿರುವುದಕ್ಕೆ ಇಡೀ ತಾಲೂಕು ಹೆಮ್ಮೆ ವ್ಯಕ್ತಪಡಿಸಿರುವುದು ತಮ್ಮಲ್ಲಿ ಹೊಸ ಉತ್ಸಾಹ ಮತ್ತು ಶಕ್ತಿ ತುಂಬಿದೆ ಎಂದು ಕಾಶಿಬಾಯಿ ಹೇಳಿದರು. ಯುವತಿಯೊಬ್ಬಳು ದೇಶರಕ್ಷಣೆಯ ಹೊಣೆ ಹೊರುವ ಸಂಕಲ್ಪ ವ್ಯಕ್ತಪಡಿಸಿರುವುದು ಸಮಾಜಕ್ಕೆ ಪ್ರೇರಣೆಯಾಗಿ ಪರಿಣಮಿಸಿದೆ.

## ಸಾಹಿತ್ಯ ಸಿಂಚನ

ಪ್ರೇಮವೆಂದರೆ........!!!

ಪ್ರೇಮವೆಂದರೆ....
ಹೃನ್ಮನಗಳ ದಿವ್ಯ ಸಂವೇದನೆ
ನರ-ನರಗಳ ನಿತ್ಯ ನಿವೇದನೆ
ಸ್ವರ-ಸ್ವರಗಳ ಸತ್ಯ ಆರಾಧನೆ
ಧಮನಿಗಳ ರಮ್ಯ ಸಂಕೀರ್ತನೆ.!

ಪ್ರೇಮವೆಂದರೆ....
ಅಧರಗಳ ಬೆಳಗುವ ಮುಗುಳು
ಕಂಗಳ ಹೊಂಬೆಳಕಿನ ತಿರುಳು
ಚಿತ್ತದಂಗಳ ಪುಳಕಿಪ ತಿಂಗಳು
ಎದೆ ಆವರಿಸಿದ ಬೆಳದಿಂಗಳು.!

ಪ್ರೇಮವೆಂದರೆ.....
ಅಡಿಗಡಿಗೂ ಬೆಳಕಿಡುವ ದೀಪ್ತಿ
ಒಳಗೆ ಪಸರಿಸಿದ ತೇಜೋವ್ಯಾಪ್ತಿ
ಅನುಕ್ಷಣ ಕಾಪಿಡುವ ಅಂತಃಶಕ್ತಿ
ಜೀವ ಜೀವ ಬೆಸೆವ ಚಿರಜ್ಯೋತಿ.!

ಪ್ರೇಮವೆಂದರೆ
ಬದುಕಿಗೆ ಬೆಳದಿಂಗಳ ತೋರಣ
ಕನಸು ಕಾಮನೆಗಳ ಹೊಂಗಿರಣ
ಭಾವಬೆಸುಗೆ ಬಂಧಗಳ ಹೂರಣ
ನಿತ್ಯ ಸತ್ಯ ಭರವಸೆಯ ಸ್ಫುರಣ.!

ಪ್ರೇಮವೆಂದರೆ...
ಸುಂಕ ಬಿಂಕವಿಲ್ಲದ ಸದಾಚಾರ
ಭಯ ಶಂಕೆಗಳಿಲ್ಲದ ಸುವಿಚಾರ
ಭಾವಭಾವಗಳ ಪ್ರೀತಿಝೇಂಕಾರ
ಜೀವಜೀವಗಳ ಶಾಂತಿ ಸಾಕಾರ.!

ಪ್ರೇಮವೆಂದರೆ...
ತೇದಷ್ಟೂ ಸೌರಭಿಸುವ ಚಂದನ
ಮಿಡಿದಷ್ಟು ನುಡಿಸುವ ಸ್ಪಂದನ
ನಿರೀಕ್ಷೆಗಳಿಲ್ಲದ ನಿಸ್ವಾರ್ಥ ಬಂಧನ
ಒಲಿದಷ್ಟೂ ನಲಿಸುವ ನಂದನ.!

ಪ್ರೇಮವೆಂದರೆ...
ಅಭಿವ್ಯಕ್ತಿಸಲಾಗದ ಪದಾತೀತ ಕವಿತೆ
ನಿತ್ಯ ಅಕ್ಷಯವಾಗುವ ಭಾವದೊರತೆ
ಅನಂತ ಬೆಳಕಿನ ಚಿರಂತನ ಪ್ರಣತೆ
ಯುಗ-ಯುಗದ ಜಗದ ಯಶೋಗಾತೆ.!

ಎ.ಎನ್.ರಮೇಶ್.ಗುಬ್ಬಿ.

## ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ಮೃತ ವಿದ್ಯಾರ್ಥಿ ತಂದೆಗೆ ಶಾಸಕ ಆರ್. ಬಸನಗೌಡರಿಂದ ಚೆಕ್ ವಿತರಣೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ವಿದ್ಯಾರ್ಥಿ ಅಭಿಷೇಕ್ ಮೋತಿಲಾಲ್ ಇತ್ತೀಚಿಗೆ ಅಪಘಾತದಲ್ಲಿ ಮೃತಪಟ್ಟಿದ್ದರಿಂದ ಮೃತ ವಿದ್ಯಾಥಿಗೆ ತಂದೆ 5 ಲಕ್ಷದ ಪರಿಹಾರ ಚೆಕ್‌ನ್ನು ಶಾಸಕ ಆರ್.ಬಸನಗೌಡ ತುರವಿಹಾಳ ಸೋಮವಾರ ವಿತರಿಸಿದರು.**



ತಾಲೂಕಿನ ಕಿರಣ ತಾಂಡಾದ ವಿದಾರ್ಥಿ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯ (ಗುಂಜಳ್ಳಿ) ವಿದ್ಯಾರ್ಥಿ ಅಭಿಷೇಕ್ ಬೆಳಿಗಿನ ಜಾವ 4 ಗಂಟೆಗೆ ವಾಯುವಿಹಾರಕ್ಕೆ ತೆರಳಿದ ಸಂದರ್ಭದಲ್ಲಿ ಖಾಸಗಿ ವಾಹನ ಡಿಕ್ಕಿ ಹೊಡೆದಿದ್ದರಿಂದ ಮೃತ ಪಟ್ಟಿದ್ದರಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 5 ಲಕ್ಷ ರೂ ಗಳ ಪರಿಹಾರ ಚೆಕ್ ವಿತರಿಸಿದ್ದಾರೆ. ಈ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ಪ್ರಚಾರ್ಯ ಮರಿಯಪ್ಪ ನಾಯಕ, ಹಾಸ್ಟೆಲ್ ಮೇಲ್ವಿಚಾರಕರ ರಮೇಶ್ ಸಜ್ಜನ್ ಇದ್ದರು.

# ಗೃಹ ಆರೋಗ್ಯ ಯೋಜನೆಯ ಮಹತ್ವ ಅರಿಯೋಣ: ಡಾ.ಸುರೇಂದ್ರ ಬಾಬು ಸಲಹೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಆರ್ಥಿಕ ತೊಂದರೆಯುಳ್ಳ ನಗರದ ಪ್ರದೇಶದ ಜನತೆಗೂ ಸಹ ಶೀಘ್ರದಲ್ಲಿಯೇ ಗೃಹ ಆರೋಗ್ಯ ಯೋಜನೆಯನ್ನು ವಿಸ್ತರಿಸಿ ಸೌಲಭ್ಯ ಒದಗಿಸುವುದಕ್ಕೆ ಅಗತ್ಯ ಸಿದ್ಧತೆ ಕೈಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು.**

ಫೆ.16ರ ಸೋಮವಾರ ನಗರದ ಜಿಲ್ಲಾ ಆರೋಗ್ಯ ತರಬೇತಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳ ವಿಭಾಗದಿಂದ ವಿವಿಧ ವೈದ್ಯಾಧಿಕಾರಿಗಳಿಗೆ, ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರಿಗೆ ಹಮ್ಮಿಕೊಳ್ಳಲಾಗಿದ್ದ ಗೃಹ ಆರೋಗ್ಯಯೋಜನೆಯ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕರ್ನಾಟಕ ಸರಕಾರವು ಆರೋಗ್ಯ ಸೇವೆ-



ಮನೆ ಬಾಗಿಲಿಗೆ ಎಂಬ ಧ್ಯೇಯದಡಿ ಜೀವನ ಶೈಲಿಯ ಖಾಯಿಲೆಗಳಾದ ರಕ್ತದೊತ್ತಡ, ಸಕ್ಕರೆ ಖಾಯಿಲೆ ಜೊತೆ ಜೊತೆಗೆ ಕ್ಯಾನ್ಸರ್ ಪತ್ತೆ ಹಾಗೂ ಚಿಕಿತ್ಸೆ ಸೇರಿದಂತೆ 14 ವಿವಿಧ ಆರೋಗ್ಯ ಸೇವೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸಿದಂತೆ ನಗರದ ಪ್ರದೇಶದ ಅರ್ಥಿಕ ತೊಂದರೆಯುಳ್ಳ ಜನತೆಗೂ ಸಹ ಶೀಘ್ರದಲ್ಲಿಯೇ ಒದಗಿಸಲು ನಿರ್ಧರಿಸಲಾಗಿದ್ದು, ಈ ದಿಶೆಯಲ್ಲಿ ಎಲ್ಲರೂ ಜನತೆಗೆ ಗುಣಮಟ್ಟದ ಆರೋಗ್ಯ ಸೇವೆ ನೀಡಲು ತರಬೇತಿಯ ಮಹತ್ವ ಪಡೆದುಕೊಳ್ಳಬೇಕು ಎಂದರು.

ಆರ್ಥಿಕ ದುರ್ಬಲ ವರ್ಗದದವರಿಗೆ ಮನೆ ಮಟ್ಟದಲ್ಲೇ ಆರೋಗ್ಯದ ಸೌಲಭ್ಯ ದೊರಕಿಸಿ ಅವರ ಕುಟುಂಬಕ್ಕಾಗುವ ಆರ್ಥಿಕ ಹೊರೆಯನ್ನು ದೂರಮಾಡಲು ಗೃಹ ಆರೋಗ್ಯದಡಿ ಅಧಿಕ ರಕ್ತದೊತ್ತಡ, ಮಧುಮೇಹ, ಮೂತ್ರ ಪಿಂಡದ ಖಾಯಿಲೆ, ಲಿವರ ಸಮಸ್ಯೆ, ಕ್ಯಾನ್ಸರ್, ತಾಯಿ ಮಗುವಿನ ಆರೋಗ್ಯ, ರಕ್ತ ಹೀನತೆ, ಮಾನಸಿಕ ಕಾಯಿಲೆ, ಕ್ಷಯರೋಗ ಲಕ್ಷಣಗಳು ಮುಂತಾದವುಗಳನ್ನು ಶೀಘ್ರವಾಗಿ ಪತ್ತೆ ಹಚ್ಚಿ ಚಿಕಿತ್ಸೆಯನ್ನು ಕೊಡಿಸುವ ಮಹತ್ವಾಕಾಂಕ್ಷಿ ಉದ್ದೇಶವನ್ನು ತರಬೇತಿಯಲ್ಲಿ ಅರ್ಥೈಸಿಕೊಂಡು ಸಮರ್ಪಣಾ ಭಾವದಿಂದ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದೀತಾ ಎಮ್.





ಎನ್., ಡಿಪಿಡಿಓ ಡಾ.ಚಂದ್ರಶೇಖರಯ್ಯ ಸ್ವಾಮಿ, ತಜ್ಞ ವೈದ್ಯರಾದ ಡಾ.ಶ್ರೀನಿವಾಸ್, ಡಾ.ವಂದನಾ, ಡಾ.ಮನೋಹರ ಪತ್ತಾರ, ತಾಲೂಕಾ ಆರೋಗ್ಯಾಧಿಕಾರಿ ಡಾ.ಅಮೃತ್ ಹುಕ್ಕೆರಿ, ಡಿಹೆಚ್‌ಇಓ ಈಶ್ವರ ಹೆಚ್.ದಾಸಪ್ಪನವರ, ಡಿಡಿ-ಎಮ್ ಲೋಕೇಶ್, ಡಿವೈಹೆಚ್‌ಇಓ ಬಸಯ್ಯ, ಜಿಲ್ಲಾ ಆಶಾ ಮೇಲ್ವಿಚಾರಕಿ ಶಾರೂನ್, ಬಿಹೆಚ್‌ಇಓ ಸರೋಜಾ ಕೆ, ಹಿರಿಯ ಹೆಚ್‌ಐಓ ಸುರೇಶ್, ಆಶಾ ಮೇಲ್ವಿಚಾರಕಿ ಮ-ರಿಯಾಳಮ್ಮ ಸೇರಿದಂತೆ ಇತರರು ಇದ್ದರು.

# ತುಳುಜಾ ಭವಾನಿ ಮಂದಿರದಲ್ಲಿ ರುದ್ರಾಕ್ಷಿ ಗಳಿಂದ ಶಿವಲಿಂಗ



ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಬಸವ ಸಾಗರ ರಸ್ತೆಯಲ್ಲಿರುವ ಶ್ರೀ ತುಳುಜಾ ಭವಾನಿ ಮಂದಿರದಲ್ಲಿ ವಿನೂತನ ಶಿವರಾತ್ರಿ ಹಬ್ಬ ಆಚರಣೆ ಹಬ್ಬದ ಪ್ರಯುಕ್ತ ಈ ಬಾರಿ ವಿಶೇಷ ರೀತಿಯಲ್ಲಿ ರುದ್ರಾಕ್ಷಿಯಿಂದ ಶಿವಲಿಂಗವನ್ನು ನಿರ್ಮಿಸಿ ಅದಕ್ಕೆ ವಿಧಿ ವಿಧಾನಗಳೊಂದಿಗೆ ಪೂಜೆ ಸಲ್ಲಿಸುವ ಮೂಲಕ ಭಕ್ತಿಭಾವದಿಂದ ಶಿವರಾತ್ರಿ ಆಚರಿಸಲಾಯಿತು.**

ಪ್ರತಿವರ್ಷವೂ ಮಂದಿರದ ಆಡಳಿತ ಮಂಡಳಿಯು ಶಿವನಿಗೆ ಅತ್ಯಂತ ಪ್ರಿಯವಾದ ವಸ್ತುಗಳಿಂದ ವಿಭಿನ್ನ ರೂಪದ ಶಿವಲಿಂಗವನ್ನು ನಿರ್ಮಿಸಿ ಶಿವರಾತ್ರಿಯನ್ನು ವಿಶಿಷ್ಟವಾಗಿ ಆಚರಿಸುವ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದು, ಈ ವರ್ಷದ ಶಿವರಾತ್ರಿ ಹಬ್ಬಕ್ಕೂ ಅದೇ ರೀತಿಯಲ್ಲಿ ವಿನೂತನ ಶಿವಲಿಂಗ ನಿರ್ಮಿಸಿ ವಿಶೇಷ ಪೂಜೆ ನಡೆಸಲಾಯಿತು. ರುದ್ರಾಕ್ಷಿಯಿಂದ ರೂಪುಗೊಂಡ ಶಿವಲಿಂಗವು ಭಕ್ತರಲ್ಲಿ ಅಪಾರ ಆಕರ್ಷಣೆ ಮೂಡಿಸಿತು. ಶಿವರಾತ್ರಿ ಅಂಗವಾಗಿ ಬೆಳಗ್ಗಿನಿಂದಲೇ ಅಭಿಷೇಕ, ಅಲಂಕಾರ, ವಿಶೇಷ ಪೂಜೆ, ಆರತಿ ಕಾರ್ಯಕ್ರಮಗಳು ನೆರವೇರಿದವು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶಿವಲಿಂಗದ ದರ್ಶನವನ್ನು ಭಕ್ತಿಭಾವದಿಂದ ಪಡೆದರು. ಈ ಸಂದರ್ಭದಲ್ಲಿ ತುಳುಜಾ ಭವಾನಿ ಮಂದಿರದ ಅರ್ಚಕರಾದ ತಿರುಮಲರಾವು ಕೃಷ್ಣ ಅವರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ದೇವಸ್ಥಾನ ಆಡಳಿತ ಮಂಡಳಿಯ ಅಧ್ಯಕ್ಷರಾದ ದಶರಥ ರಾವ್ ಮಿರಜಕರ ಉಪಾಧ್ಯಕ್ಷರಾದ ಶ್ರೀನಿವಾಸ ಬುಸಾರೆ ಖಜಾಂಚಿ ದೇವರಾಜ ಛತ್ರಬಂಧ ಶಾಮ ಚವ್ಹಾಣ ಪತ್ರಕರ್ತರಾದ ಗೌತಮ್ ಕುಮಾರ ಸೋಮಶೇಖರ ಪ್ರಿಯಾದರ್ಶಿನಿ ಮಹಿಳೆಯರು ಚಿಕ್ಕ ಮಕ್ಕಳು ಭಕ್ತಾದಿಗಳು , ಭಾಗವಹಿಸಿ ಶಿವರಾತ್ರಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು. ವಿನೂತನ ಶಿವಲಿಂಗ ನಿರ್ಮಾಣ ಹಾಗೂ ಶ್ರದ್ಧಾಭಕ್ತಿಯಿಂದ ನಡೆದ ಪೂಜಾ ಕಾರ್ಯಕ್ರಮಗಳು ಭಕ್ತರಲ್ಲಿ ಧಾರ್ಮಿಕ ಉತ್ಸಾಹ ಹೆಚ್ಚಿಸಿದವು. ಮಂದಿರ ಆಡಳಿತ ಮಂಡಳಿ ಮುಂದಿನ ವರ್ಷವೂ ಇನ್ನೂ ವಿಶಿಷ್ಟ ರೀತಿಯಲ್ಲಿ ಶಿವರಾತ್ರಿ ಆಚರಿಸುವುದಾಗಿ ತಿಳಿಸಿದೆ.

# ಮಸ್ಕಿಯಲ್ಲಿ ಕುಂಭ-ಕಳಸದೊಂದಿಗೆ ಅದ್ದೂರಿಯಾಗಿ ಜರುಗಿದ ಸಿದ್ದರಾಮೇಶ್ವರ ಭಾವಚಿತ್ರದ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದಲ್ಲಿ ಭೋವಿ(ವಡ್ಡರ) ಸಮಾಜದಿಂದ ಸಿದ್ದರಾಮೇಶ್ವರ ಜಯಂತಿ ಹಾಗೂ ಸಿದ್ದರಾಮೇಶ್ವರ ದೇವಸ್ಥಾನದ 24ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಕುಂಭ-ಕಳಸದೊಂದಿಗೆ ಸಿದ್ದರಾಮೇಶ್ವರ ಭಾವಚಿತ್ರ ಮೆರವಣಿಗೆಗೆ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿಜಿ, ಗಚ್ಚಿನಮಠದ ವರರುದ್ರಮುನಿ ಶಿವಾಚಾರ್ಯರು, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಮೆರವಣಿಗೆಗೆ ಚಾಲನೆ ನೀಡಿದರು.**

ಪಟ್ಟಣದ ಕವಿತಾಳ ಕ್ರಾಸ್‌ನಿಂದ



ಗಾಂಧಿನಗರ, ಅಶೋಕ ಸರ್ಕಲ್, ಅಗಸಿ, ಕನಕ ವೃತ್ತದ ಮೂಲಕ ಭ್ರಮರಾಂಭ ಖಲೀಲ್ ವೃತ್ತ. ದೈವದಕಟ್ಟೆ, ತೇರು ಬಜಾರ, ದೇವಸ್ಥಾನದ ಪಕ್ಕದಲ್ಲಿರುವ ಸಿದ್ದರಾಮೇಶ್ವರ ದೇವಸ್ಥಾನಕ್ಕೆ ಮೆರವಣಿಗೆ ತಲುಪಿತು.

ಈ ಸಂದರ್ಭದಲ್ಲಿ ಖಾದಿ ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್ ಬಸನಗೌಡ ತುರುವಿಹಾಳ,

ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಮಾಜಿ ಅಧ್ಯಕ್ಷ ಮಲ್ಲಯ್ಯ ಅಂಬಾಡಿ, ಭೋವಿ ಸಮಾಜದ ಮುಖಂಡರಾದ ಆನಂದ ಬನಗಲ್, ಸಾರಪ್ಪ ಬಂಗಾಲಿ, ರಮೇಶ ಗುಡಸಲಿ, ಶಿವರಾಜ ಬುಕ್ಕಣ್ಣ, ದುರಗಪ್ಪ ಗೋನ್ವಾರ, ಮಲ್ಲಯ್ಯ ಛಾವಣಿ, ಜಿ.ಎಸ್.ಆನಂದ ವಿರೇಶ ಬಡಿಗಿ, ಆಂಜನೇಯ, ಅಮರೇಶ, ಸಾನಬಾಳ, ರವಿ ಸೇರಿದಂತೆ ಭೋವಿ ಸಮಾಜದ ಮುಖಂಡರು, ಮಹಿಳೆಯರು, ನೂರಾರು ಯುಕವರಿದ್ದರು.

# ಗಾಂಧಿ ಗ್ರಾಮ ಪುರಸ್ಕಾರಪಡೆದ ಸಂತಪುರ ಗ್ರಾಮ ಪಂಚಾಯತ :ಸಾರ್ವಜನಿಕ ಶೌಚಾಲಯದ ಕೊರತೆ,

ನೈಜ್ಯ ದೆಸೆ ನ್ಯೂಸ್

**ಔರಾದ: ಹೋಬಳಿ ಕೇಂದ್ರವಾದ ಸಂತಪುರನಲ್ಲಿ ಜನಸಂಖ್ಯೆ ಇತ್ತೀಚೆಗೆ ಬೆಳೆಯುತ್ತಿದೆ. ಆದರೆ ಬೆಳವಣಿಗೆಯ ಜತೆಗೆ ಅವಶ್ಯಕತೆಗಳನ್ನು ಒದಗಿಸಲು ಸ್ಥಳೀಯ ಆಡಳಿತ ನಿರ್ವಹಿಸುವ ಪ್ರಮುಖರು ಲಕ್ಷ್ಯವಹಿಸುತ್ತಿಲ್ಲ ಎಂಬ ಆರೋಪ ಕೇಳಿ ಬರುತ್ತಿದೆ.**

ಆದರೆ ಸರಕಾರ ವಿವಿಧ ಯೋಜನೆಯಡಿ ಪ್ರಮುಖ ಗ್ರಾಮ ಪಂಚಾಯತಿಗಳಿಗೆ ಲಕ್ಷ್ಯಂತರ ರೂ. ಅನುದಾನ ನೀಡುತ್ತಿದೆ. ಅದರಲ್ಲೂ ಸಂತಪುರ ಗ್ರಾಮ ಪಂಚಾಯತಿ ಗಾಂಧಿ ಗ್ರಾಮ ಪುರಸ್ಕಾರ ಪಡೆದಿದ್ದು ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ ಸಂತಪುರನಲ್ಲಿ ಹಲವು ವರ್ಷಗಳಿಂದ ಸಾರ್ವಜನಿಕ ಶೌಚಾಲಯಗಳ ಕೊರತೆಯಿದ್ದು, ಜನರು ಬಾಧೆಯಿಂದ



ಬಳಲುವಂತಾಗಿದೆ. ಸಂತಪುರನಲ್ಲಿ ಎಲ್ಲಿಯೂ ಸಾರ್ವಜನಿಕ ಶೌಚಾಲಯ ಸಿಗುವುದಿಲ್ಲ.

ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಸಂತಪುರ ಪ್ರಮುಖ ರಸ್ತೆ ಬದಿ ಸೇರಿದಂತೆ ಪ್ರಮುಖ ಕಚೇರಿ,ಆಸ್ಪತ್ರೆ, ಪೊಲೀಸ್ ಸ್ಟೇಷನ್,ಬಳಿ ಶೌಚಾಲಯ ಅಥವಾ ಮೂತ್ರಾಲಯಗಳ ಸೌಲಭ್ಯ ಕಲ್ಪಿಸದೇ ಇರುವುದರಿಂದ ಸ್ಥಳೀಯರು ಸೇರಿದಂತೆ ಸಾರ್ವಜನಿಕರು ಸಮಸ್ಯೆ ಎದುರಿಸುವಂತೆ ಮಾಡಿದ್ದು ಸುಳ್ಳಲ್ಲ. ಮೂತ್ರ ವಿಸರ್ಜನೆಗೆ ಅಗತ್ಯ ವ್ಯವಸ್ಥೆ ಇಲ್ಲದ ಕಾರಣ ಶಿಶು ಅಭಿವೃಧಿ, ನಾಡಕಚೇರಿ ಹಿಂಭಾಗದಲ್ಲಿ ಕಾಂಪೌಂಡ, ಒಳಗಡೆಯೇ ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಶಿಶು ಅಭಿವೃದ್ಧಿ ಇಲಾಖೆ, ನಾಡಕಚೇರಿ,ಕಾಂಪೌಂಡ ಗೋಡೆಗೆ ಜನರು ಮೂತ್ರ ವಿಸರ್ಜನೆ ಮಾಡುತ್ತಿರುವ ಕಾರಣ ಅಲ್ಲಿಗೆ ಬರುವ ಹೆಣ್ಣು ಮಕ್ಕಳಿಗೆ ತೀವ್ರ ಮುಜುಗರ ಎದುರಿಸುವಂತಾಗಿದೆ.

ಸಂತಪುರ ಗ್ರಾಮದ ಮುಖ್ಯ ರಸ್ತೆ,ಆಸ್ಪತ್ರೆ, ನಾಡಕಚೇರಿ, ಪೊಲೀಸ್ ಸ್ಟೇಷನ್, ಅಕ್ಕ ಪಕ್ಕದಲ್ಲಿ ಸಾರ್ವಜನಿಕರ ಬಳಕೆಗಾಗಿ ಮೂತ್ರಾಲಯಗಳನ್ನು ನಿರ್ಮಾಣ ಮಾಡಬೇಕಿದ್ದ ಸ್ಥಳೀಯ ಗ್ರಾಮ ಪಂಚಾಯತಿ ನಿರ್ಲಕ್ಷ್ಯ ವಹಿಸಿದೆ. ಈ ಕಾರಣಕ್ಕಾಗಿ ಸ್ಥಳೀಯರು ಹಾಗೂ ಸಾರ್ವಜನಿಕರು ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ.

# ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ತರಬೇತಿ ಕಾರ್ಯಗಾರ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಪ್ರತಿಯೊಬ್ಬ ಭಾರತೀಯರು ತಮ್ಮ ಮೂಲಭೂತ ಹಕ್ಕುಗಳನ್ನು ಪಡೆಯುವುದು ಸಂವಿಧಾನದ ಆಶಯವಾಗಿದೆ. ಕಾನೂನು ಸೇವಾ ಪ್ರಾಧಿಕಾರ ಸೇರಿದಂತೆ ಸರ್ಕಾರದ ಸವಲತ್ತು ಮುಟ್ಟಿಸುವ ಕೆಲಸವನ್ನು ಅರೆಕಾಲಿಕ ಸೇವಾ ಸ್ವಯಂ ಸೇವಕರು ಮಾಡಬೇಕೆಂದು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಗೌರವಾನ್ವಿತ ಮಹಾವರಕರ್ ಗುಲ್ಜರ್ ಲಾಲ್ ಅವರು ಹೇಳಿದರು.**

ಫೆ.16ರ ಸೋಮವಾರ ದಂದು ನಗರದ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಔಟ್ ಲಾಡ್ ಇಂಡಿಯಾ ಸಂಸ್ಥೆ ಬೆಂಗಳೂರು ಸಹಯೋಗದಲ್ಲಿ



ಹಮ್ಮಿಕೊಂಡಿದ್ದ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ 4 ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಪ್ರತಿಯೊಬ್ಬರು ಅನುಭವಿಸುತ್ತಿರುವ ಸ್ವಾತಂತ್ರ ?ಯವು ದೇಶದ ಸಂವಿಧಾನ ನೀಡಿರುವ ಅದ್ಭುತ ಕೊಡುಗೆಯಾಗಿದೆ. ಇದರ ಜೊತೆಗೆ ವ್ಯಕ್ತಿಗೆ ಸಿಗಬೇಕಾದ ಸೌಲಭ್ಯ, ಮಾಹಿತಿ, ಸೇವೆಗಳನ್ನು ನೀಡಲು ನಿಯಮಿತ ಜವಾಬ್ದಾರಿ ಇರುತ್ತದೆ. ಇದನ್ನು ಒದಗಿಸಲು ಹಲವಾರು ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ. ಆದರೂ ಸಹ ಕೆಲವರಿಗೆ ಕಾನೂನು ಅರಿವಿನ ಕೊರತೆಯಿಂದ ಸೌಲಭ್ಯ, ಸೇವೆ ಪಡೆಯಲು ಆಗುತ್ತಿಲ್ಲ.

ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಿಗಬೇಕಾದ ಸಾಮಾನ್ಯ ಕಾನೂನಿನ ಜ್ಞಾನವನ್ನು ಒದಗಿಸಿ ಆತನನ್ನು ತೊಂದರೆಗಳಿಂದ ಪಾರು ಮಾಡುವ ಗುರುತರ ಜವಾಬ್ದಾರಿಯನ್ನು ಸ್ವಯಂ ಸೇವಕರು ತೆಗೆದುಕೊಳ್ಳಬೇಕು. ಸಮಾಜ ಸೇವೆ ಮಾಡುವ ಮನಸ್ಥಿತಿಯುಳ್ಳವರು ಮುಂದೆ ಬಂದಿರುವುದು ಶ್ಲಾಘನೀಯವಾಗಿದೆ ಎಂದರು. ಇದಕ್ಕೂ ಮೊದಲು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಗೌರವಾನ್ವಿತ ನ್ಯಾ.ಹೆಚ್.ಎ.ಸಾತ್ವಿಕ್ ಅವರು ಮಾತನಾಡಿ, ಸಾರ್ವಜನಿಕರಿಗೆ ಕಾನೂನುಗಳ ಸಲಹೆಗಳನ್ನು ಉಚಿತವಾಗಿ ನೀಡುವುದು ಈ ತರಬೇತಿಯ ಉದ್ದೇಶವಾಗಿದೆ.

ಕೆಲವೊಂದು ಸಂದರ್ಭದಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಸಹ ತೆಗೆದುಕೊಳ್ಳಲು ಸಾರ್ವಜನಿಕರಿಗೆ ಮಾಹಿತಿ ಗೊತ್ತಿರುವುದಿಲ್ಲ. ಅಂತವರಿಗೆ ಸರಿಯಾದ ಮಾಹಿತಿ ಸಲಹೆಗಳನ್ನು ಅರೆಕಾಲಿಕ ಸೇವಾ ಸ್ವಯಂ ಸೇವಕರು ನೀಡಿ, ಸರ್ಕಾರದ ವಿವಿಧ ಸೌಲಭ್ಯವನ್ನು ಒದಗಿಸಬೇಕೆಂದರು. ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಮಾತನಾಡಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಬೇಕಾಗುವ ಅಗತ್ಯ ನೆರವುವನ್ನು ಆರೋಗ್ಯ ಇಲಾಖೆಯಿಂದ ನೀಡುವುದರ ಜೊತೆಗೆ ಪ್ರಾಥಮಿಕ ಆರೋಗ್ಯ ದಿಂದ ಜಿಲ್ಲಾ ಮಟ್ಟದ ವೈದ್ಯರಿಗೆ ಕಾನೂನು ಅರಿವು ನೀಡಲು ಶ್ರಮಿಸಲಾಗುತ್ತದೆ ಎಂದರು. ಇದೇ ಸಂದರ್ಭದಲ್ಲಿ ಕುಟುಂಬ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀಕಾಂತ್ ಎಸ್.ವಿ., ಬೆಂಗಳೂರಿನ ಔಟ್ ಲಾಡ್ ಇಂಡಿಂಯಾ ಸಂಸ್ಥೆಯ ವೆಂಕಟೇಶ ಎಚ್., ಜೋಮಿ ಜಾಯ್ ಸೇರಿದಂತೆ ಇತರರು ಇದ್ದರು. ವಕೀಲರಾದ ಮಾಲತಿ ಅವರು ನಿರೂಪಣೆ, ಸ್ವಾಗವನ್ನು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪನವರು, ವಂದನಾರ್ಪಣೆಯನ್ನು ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ನಿರ್ವಹಣೆ ಮಾಡಿದರು.

## ನೇಮಕಾತಿ ಪ್ರಕಟಣೆ

NLC ನೇಮಕಾತಿ 2026–21 ಫಾರ್ಮಾಸಿಸ್ಟ್, ಥಿಯೇಟ–ರ್ ಅಸಿಸ್ಟೆಂಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ NLC ನೇಮಕಾತಿ 2026: 21 ಫಾರ್ಮಾಸಿಸ್ಟ್, ಥಿಯೇಟರ್ ಅಸಿಸ್ಟೆಂಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ನೆಯ್ವೇಲಿ ಲಿಗ್ನೈಟ್ ಕಾರ್ಪೊರೇಷನ್ ಲಿಮಿಟೆಡ್ ಫೆಬ್ರವರಿ 2026 ರ NLC ಅಧಿಕೃತ ಅಧಿಸೂಚನೆಯ ಮೂಲಕ ಫಾರ್ಮಾಸಿಸ್ಟ್, ಥಿಯೇಟರ್ ಅಸಿಸ್ಟೆಂಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 10–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 09–02–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10–ಮಾರ್ಚ್–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 10–03–2026 ಈಗಾಗಲೇ ನೋಂದಾಯಿಸಿಕೊಂಡಿರುವ ಮತ್ತು ಸಮಯ ಮಿತಿಯೊಳಗೆ ಶುಲ್ಕವನ್ನು ಪಾವತಿಸಿರುವ ಅಭ್ಯರ್ಥಿಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11–03–2026 ಅಧಿಕೃತ ವೆಬ್‌ಸೈಟ್: nlcindia.in

# ಹಾಲುಮತ ಸಮುದಾಯ ಹಾಲಿನಂತ ಮನಸ್ಸಿನವರು ದೊಡ್ಡಪ್ಪಗೌಡ ಎಸ್ ಪಾಟೀಲ್

ನೈಜ್ಯ ದೆಸೆ ನ್ಯೂಸ್

**ಜೇವರ್ಗಿ: ತಾಲ್ಲೂಕಿನ ಮಾರಡಗಿ ಎಸ್. ಎ ಗ್ರಾಮದಲ್ಲಿ ಹಮ್ಮಿಕೂಡಿದಂತಹ ಬೀರಲಿಂಗೇಶ್ವರ ದೇವಸ್ಥಾನದ ನೂತನ ಕಟ್ಟಡ ಮತ್ತು ನೂತನ ಮೂರ್ತಿ ಪ್ರಾಣ ಪ್ರತಿಷ್ಠಾಪನ ಕಾರ್ಯಕ್ರಮದ ಉದ್ಘಾಟಕರಾಗಿ ಮಾತನಾಡಿದಂತ ಜೆಡಿಎಸ್ ರಾಜ್ಯ ಕಾರ್ಯಧ್ಯಕ್ಷರು ಹಾಗೂ ಮಾಜಿ ಶಾಸಕ ದೊಡ್ಡಪ್ಪಗೌಡ ಎಸ್ ಪಾಟೀಲ್ ನರಿಬೋಳ ಅವರು ಹಾಲುಮತ ಸಮಾಜದವರು.**

ಹಾಲಿನಂತಹ ಮನಸ್ಸಿನವರಾಗಿದ್ದು ಸಮಾಜದ ಸರ್ವ ಬಾಂಧವರು ಸೇರಿ ಮಾರಡಗಿ ಎಸ್. ಎ ಗ್ರಾಮದಲ್ಲಿ ಒಂದು ಸುಂದರವಾದ ಬೀರಲಿಂಗೇಶ್ವರ ದೇವಸ್ಥಾನ ನಿರ್ಮಿಸಿರುವುದು ಸಂತೋಷದ ವಿಚಾರ ಮುಂದಿನ ದಿನಗಳಲ್ಲಿ ಬೀರಲಿಂಗೇಶ್ವರ ದೇವಸ್ಥಾನವು ಸಕಲ ಸೌಲಭ್ಯಗಳೊಂದಿಗೆ ಸಭೆ ಸಮಾರಂಭಗಳು ಒಂದು ದೇವಸ್ಥಾನದ ಆವರಣದಲ್ಲಿ ನಡೆಯುವಂತಾಗಲಿ



ಎಂದು ಶುಭ ಹಾರೈಸಿದರು. ಕಾರ್ಯಕ್ರಮದ ದಿವ್ಯಾ ಸಾನಿಧ್ಯ ವಹಿಸಿದ್ದ ಪರಮಪೂಜ್ಯ ಪಾಂಡುರಂಗ ಮಹಾರಾಜರು ತ್ರಿವಿಕ್ರಮ ನಂದ ಸರಸ್ವತಿ ಸ್ವಾಮಿ ಮಠ ಗಂವ್ಹಾರ್ ಪೂಜ್ಯ ಲಿಂಗ ಬೀರದೇವರು ಕನಕ ಗುರಪೀಠ ತಿಂಥಣಿ ಬ್ರಿಜ್ ಶರಣು ಗದ್ದಿಗಿ ಅಧ್ಯಕ್ಷರು ಕರವೇ ಉತ್ತರ ಕರ್ನಾಟಕ ವಿಭಾಗ ಅವರು ವಹಿಸಿದ್ದರು.

ಈರಣ್ಣ ವಿಶ್ವಕರ್ಮ ಕಾಚಪೂರ ಇವರ ಕೈಯಿಂದ ಮೂಡಿಬಂದ ಬೀರಲಿಂಗೇಶ್ವರ ಮೂರ್ತಿಯು ಶನಿವಾರ ಬೆಳಿಗೆ ಗ್ರಾಮದ ಹನುಮನ ದೇವಸ್ಥಾನದಿಂದ ಕುಂಭ ಕಳಸ ಸರ್ವ ವಾದ್ಯ ವೈಭವಗಳೊಂದಿಗೆ ಗಂಗಾ ಸ್ಥಾನಕ್ಕೆ ತೇರಳಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮುಖಾಂತರ ಬೀರಲಿಂಗೇಶ್ವರ ದೇವಸ್ಥಾನಕ್ಕೆ ತೆರಳಿ ಹೋಮ ಹವನಗಳೊಂದಿಗೆ ಸರ್ವ ಪೂಜ್ಯರ ಸಮ್ಮುಖದಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಕಾಸಿಂ ಪಟೇಲ್ ಮುಧೋಳ , ಬೈಲಪ್ಪ ನೆದಲಗಿ, ಸಾಯಬಣ್ಣ ದೊಡ್ಮನಿ,ನಿಂಗಣ್ಣ ಬಂಡಾರಿ,ನಿಂಗಣ್ಣ ಎಂ ದೊಡ್ಮನಿ, ತಾಲ್ಲೂಕ್ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಗುರುಲಿಂಗಪ್ಪ ಗೌಡ ಪೊಲೀಸ್ ಪಾಟೀಲ್, ಬಸವರಾಜ ಗೌಡ ಮಾಲಿ ಪಾಟೀಲ್, ಶರಣಯ್ಯ ಸ್ವಾಮಿ ಗಂಧದದ ಮಠ, ಮಲ್ಲಿಕಾರ್ಜುನ ಇಜೇರಿ,ಬಸವರಾಜ್ ಮುಡಬುಳ, ಹಲವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾಳು ಹಿಪ್ಪರಗಿ ಸ್ವಾಗತಿಸಿದರು ನಿಂಗಣ್ಣ ರದೇವಾಡಗಿ ಪ್ರಾಸ್ತಾವಿಕ ಭಾಷಣ ಮಾಡಿದರು.

## ವಸತಿ ಶಾಲೆಯ 3ನೇ ಮಹಡಿಯಿಂದ ಹಾರಿ ವಿದ್ಯಾರ್ಥಿ ಆತ್ಮಹತ್ಯೆ

ನೈಜ್ಯ ದೆಸೆ ನ್ಯೂಸ್

**ಚಿತ್ರದುರ್ಗ: ಮೂರನೇ ಮಹಡಿಯಿಂದ ಹಾರಿ ವಿದ್ಯಾರ್ಥಿ ಆತ್ಮಹತ್ಯೆಮಾಡಿಕೊಂಡಿರುವ ಘಟನೆ ಚಿತ್ರದುರ್ಗ ಜಿಲ್ಲೆ ಭರಮಸಾಗರದ ಖಾಸಗಿ ಶಾಲೆಯಲ್ಲಿ ನಡೆದಿದೆ.**



ಇಲ್ಲಿನ ವಸತಿ ಶಾಲೆಯ ಎಸ್‌ಎಲ್‌ಎಲ್‌ಸಿ ವಿದ್ಯಾರ್ಥಿ 16 ವರ್ಷದ ಕೊಟ್ರೇಶ್ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ಕೊಟ್ರೇಶ್ ಚಿತ್ರದುರ್ಗದ ಕರಿಯಣ್ಣನಹಳ್ಳಿ ಮೂಲದವನಾಗಿದ್ದು, ಈವರೆಗೆ ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಕೊಟ್ರೇಶ್ 3ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಘಟನೆ ಸಂಬಂಧ ಭರಮಸಾಗರ ಪೊಲೀಸ್ ಠಾಣೆ ಪ್ರಕರಣ ದಾಖಲಾಗಿದೆ.

# ಪತ್ರಕರ್ತರ ತುರ್ತು ನಿಧಿ ಯೋಜನೆ ರೂಪಿಸಿದ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಕಾರ್ಯ ಶ್ಲಾಘನೀಯ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ರಿಪೋರ್ಟರ್ಸ್ ಗಿಲ್ಡ್ ರೂಪಿಸಿರುವ ಪತ್ರಕರ್ತರ ತುರ್ತು ನಿಧಿಯಿಂದ ಹಿರಿಯ ಪತ್ರಕರ್ತ ದಿ.ಸೈಯದ್ ಅಶ್ರಫ್ ಅವರ ಕುಟುಂಬಕ್ಕೆ 1 ಲಕ್ಷ ರೂಪಾಯಿ ಚೆಕ್ ವಿತರಣೆ ಕಾರ್ಯಕ್ರಮ ಫೆ.16ರಂದು ನಡೆಯಿತು. ರಾಯಚೂರು ಪ್ರವಾಸದಲ್ಲಿದ್ದ, ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಅವರು ನಗರದ ಪತ್ರಿಕಾ ಭವನಕ್ಕೆ ಆಗಮಿಸಿ ಸೈಯದ್ ಅಶ್ರಫ್ ಅವರ ಕುಟುಂಬದವರಿಗೆ ಪತ್ರಕರ್ತರ ಸಮಕ್ಷಮದಲ್ಲಿ ಚೆಕ್ ವಿತರಿಸಿದರು.**

ಈ ವೇಳೆ ಸಲೀಂ ಅಹ್ಮದ್ ಅವರು ಮಾತನಾಡಿ, ಪತ್ರಕರ್ತರು ಸಮಾಜದ ಎರಡು ಕಣ್ಣುಗಳಿದ್ದಂತೆ ಎಂದು ಪತ್ರಿಕಾವೃತ್ತಿಯ ಘನತೆ ಬಗ್ಗೆ ವಿವರಿಸಿದರು. ರಾಯಚೂರು ರಿಪೋರ್ಟರ್ಸ್ ಗಿಲ್ಡ್ ತುರ್ತು ನಿಧಿಗೆ ಅನುದಾನ ಒದಗಿಸುವ ಕು–ರಿತು ಮುಖ್ಯಮಂತ್ರಿ ಹಾಗೂ ಮಾಧ್ಯಮ ಸಲಹೆಗಾರರೊಂದಿಗೆ ಚರ್ಚೆ ನಡೆಸಲಾಗುವುದು. ಗಿಲ್ಡನ ಬೆಳ್ಳಿ ಮಹೋತ್ಸವ ಕಾರ್ಯಕ್ರಮಕ್ಕೂ ಸಹಕಾರ ನೀಡುವುದಾಗಿ ಅವರು ಭರವಸೆ ನೀಡಿದರು. ಪತ್ರಕರ್ತರ ಹಿತಕ್ಕಾಗಿ ಎಲ್ಲರೂ ಕೈಜೋಡಿಸಬೇಕು ಎಂದರು. ಇದಕ್ಕು ಮೊದಲು ಗಿಲ್ಡನ ಅಧ್ಯಕ್ಷ ವಿಜಯ ಜಾಗಟಗಲ್ ಅವರು ಮಾತನಾಡಿ, ಸೈಯದ್ ಅಶ್ರಫ್ ಅವರ ಪತ್ರಿಕಾ ಸೇವೆಯ ಬಗ್ಗೆ ವಿವರಿಸಿದರು.

ನಗರದಲ್ಲಿ 200ಕ್ಕು ಹೆಚ್ಚು ಪತ್ರಕರ್ತರು ಕಾರ್ಯನಿರ್ವಹಿಸುತ್ತಿದ್ದು, ಅವ–ರಿಗಾಗಿ ತುರ್ತು ನಿಧಿ, ಆರೋಗ್ಯ ವಿಮೆ ಸೇ–ರಿದಂತೆ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ, ರಾಜ್ಯ ನೀತಿ ಆಯೋಗದ ಸದಸ್ಯರಾದ ಡಾ.ರಝಾಕ್ ಉಸ್ತಾದ್, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಆರ್.ಗುರುನಾಥ, ರಾಜ್ಯ ಸಮಿತಿ ಸದಸ್ಯ ಬಸವರಾಜ ನಾಗಡದಿನ್ನಿ, ಮುಖಂಡರಾದ ಬಷೀರುದ್ದಿನ್, ಮಹಮ್ಮದ್ ಶಾಲಂ, ಅಸ್ಲಂ ಪಾಷಾ, ರುದ್ರಪ್ಪ ಅಂಗಡಿ ಸೇರಿದಂತೆ ಜಿಲ್ಲೆಯ ಹಿರಿಯ, ಕಿರಿಯ ಪತ್ರಕರ್ತರು ಇದ್ದರು.

## ಅತ್ಯಾಚಾರ ಎಸಗಿ ಅಂಗನವಾಡಿ ಸಹಾಯಕಿ ಕೊಲೆ

ನೈಜ್ಯ ದೆಸೆ ನ್ಯೂಸ್

**ಶಿವಮೊಗ್ಗ: ಜಿಲ್ಲೆಯ ಶಿಕಾರಿಪುರ ತಾಲೂಕಿನ ಶಿರಾಳಕೊಪ್ಪ ಬಿಳಿಕಿ ಗ್ರಾಮದಲ್ಲಿ ಅಂಗನವಾಡಿ ಸಹಾಯಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ.**




ಗ್ರಾಮದ ಅಂಗನವಾಡಿಯಲ್ಲಿ ಸಹಾಯಕಿಯಾಗಿದ್ದ 50 ವರ್ಷದ ಮಹಿಳೆ ಮನೆಯಲ್ಲಿಯೇ ಕೊಲೆಯಾಗಿದ್ದಾರೆ. ಶನಿವಾರ ಬೆಳಗ್ಗೆ ಮಹಿಳೆಯ ಮನೆ ಬಾಗಿಲು ತೆರೆದಿದ್ದು ಅವರು ಹೊರಗೆ ಬಂದಿರಲಿಲ್ಲ. ನೆರೆ ಮನೆಯವರು ಹೋಗಿ ನೋಡಿದಾಗ ಬೆತ್ತಲೆಯಾಗಿ ಕೊಲೆಯಾದ ಸ್ಥಿತಿಯಲ್ಲಿ ನೆಲದ ಮೇಲೆ ಬಿದ್ದಿದ್ದರು. ಮಾಹಿತಿ ತಿಳಿದ ಪೊಲೀಸರು, ಶ್ವಾನದಳ, ಬೆರಳಚ್ಚು ತಜ್ಞರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಪೊಲೀಸರು ಗ್ರಾಮಸ್ಥರಿಂದ ಮಾಹಿತಿ ಪಡೆದುಕೊಂಡಿದ್ದು ತನಿಖೆ ಕೈಗೊಂಡಿದ್ದಾರೆ. ಶಿರಾಳಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ಮಹಿಳೆಯ ಪುತ್ರ ಕೂಲಿ ಕೆಲಸಕ್ಕಾಗಿ ಬೇರೆ ಊರಿಗೆ ತೆರಳಿದ್ದರು. ಮಹಿಳೆ ಮನೆಯಲ್ಲಿ ಒಬ್ಬರೇ ವಾಸವಾಗಿದ್ದರು. ಅವರ ಪತಿ ಹಿಂದೆಯೇ ಮೃತಪಟ್ಟಿದ್ದು, ಮೂವರು ಪುತ್ರಿಯರ ಮದುವೆಯಾಗಿದೆ.

# ಮಹಾಶಿವರಾತ್ರಿಯಂದು ಈಶ್ವರನ ದರ್ಶನ ಪಡೆದು ಪುನೀತರಾದ ಭಕ್ತರು

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಮಹಾಶಿವರಾತ್ರಿ ನಿಮಿತ್ತ ಪಟ್ಟಣದ ಈಶ್ವರ ದೇವಸ್ಥಾನ ಸೇರಿದಂತೆ ತಾಲೂಕಿನ ವಿವಿಧ ದೇವಸ್ಥಾನ, ಮಠ–ಮಾನ್ಯಗಳಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ಜರುಗುವ ಜತೆಗೆ ಭಕ್ತ ಸಮೂಹ ಪುಣ್ಯ ಕ್ಷೇತ್ರಗಳಿಗೆ ತೆರಳಿ ಮಹಾದೇವನ ದರ್ಶನ ಪಡೆಯುವ ದೃಶ್ಯ ಸಾಮಾನ್ಯವಾಗಿತ್ತು.**

ಸ್ಥಳೀಯ ಈಶ್ವರ ದೇವಸ್ಥಾನ, ನಗರೇಶ್ವರ ದೇವಸ್ಥಾನ, ಇತಿಹಾಸ ಪ್ರಸಿದ್ಧ ಸುಕ್ಷೇತ್ರ ಅಮರೇಶ್ವರ ಹಾಗೂ ಗುರುಗುಂಟಾದ ಈಶ್ವರ ದೇವಸ್ಥಾನ, ನವಲಿ ಜಡೆಶಂಕರಲಿಂಗೇಶ್ವರ, ಘನಮಠೇಶ್ವರ ಸಂತೆಕಲ್ಲೂರು ಮಠ,



ದೇವರಭೂಪುರ ಬೃಹನ್ಮಠ, ಯರ ಡೋಣಿ ಸಿದ್ದರಾಮೇಶ್ವರ ಗುರುಮಠ, ಸಜ್ಜಲಗುಡ್ಡದ ಅಂಕಲಿಮಠ, ಶರಣಮ್ಮನವರ ಮಠ ಸೇ–ರಿದಂತೆ ನಾನಾ ಮಠ–ಮಂದಿರಗಳಲ್ಲಿ ಬೆಳಗ್ಗೆಯಿಂದಲೆ ವಿಶೇಷ ಪೂಜೆಗಳು ಜರು ಗಿದವು. ಪಟ್ಟಣದಲ್ಲಿ ಮಹಾಶಿವರಾತ್ರಿ ಅಂಗವಾಗಿ ಬೆಳಗ್ಗೆಯಿಂದ ಉಪವಾಸ ವ್ರತಕೈಗೊಂಡ ಮಹಿಳೆಯರು ಹಾಗೂ ಮಕ್ಕಳು ಸೇ–ರಿದಂತೆ ನೂರಾರು ಭಕ್ತರು ಸಂಜೆ ಈಶ್ವರನ ದರ್ಶನ ಪಡೆದು ವ್ರತ ಅಂತ್ಯಗೊಳಿಸುವರು.

ಈಶ್ವರ ದೇವಸ್ಥಾನ ಸಮಿತಿಯ ಡಾ. ಎನ್. ಎಲ್.ನಡುವಿನಮನಿ, ಡಾ.ಶರಣಗೌಡ, ವೀರೇಶ ಐದನಾಳ, ಬಿ.ಆರ್.ಮೇಟಿ, ಮಲ್ಲಣ್ಣವಾರದ ಸೇರಿದಂತೆ ದೇವರ ದರ್ಶನ ಪಡೆಯಲು ಆಗಮಿಸುವ ಭಕ್ತರ ಮಧ್ಯೆ ನೂಕುನುಗ್ಗಲು ಏರ್ಪಡದಂತೆ ಸೂಕ್ತ ವ್ಯವಸ್ಥೆ ಕಲ್ಪಿಸಿದ್ದರು ಹಾಗೂ ಈ ಸಂದರ್ಭದಲ್ಲಿ ಪೊಲೀಸ್ ಬಂದೋ ಬಸ್ತ್ ವ್ಯವಸ್ಥೆ ಸಹ ಕಲ್ಪಿಸಲಾಗಿತ್ತು.

# ನಿವೃತ್ತ ಯೋಧ ರಾಜು ಕಾಳೆಗೆ ಅದ್ದೂರಿ ಸ್ವಾಗತ




**ಔರಾದ್: ತಾಲ್ಲೂಕಿನ ಆಲೂರ (ಬಿ) ಗ್ರಾಮದ ಯೋಧ ರಾಜು ಮಲಗೊಂಡ ಕಾಳೆ ಅವರು 24 ವರ್ಷ 12 ದಿನಗಳ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಬೀದರ್ ನಗರಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ಸ್ವಗ್ರಾಮದ ಯುವಕರು ಜಾಥಾ ಮೂಲಕ ಅದ್ದೂರಿಯಾಗಿ ಸ್ವಾಗತಿಸಿದರು.**

ರೈಲ್ವೆ ನಿಲ್ದಾಣದಲ್ಲಿ ಆರತಿ ಎತ್ತಿ, ಹೂಮಳೆ ಸುರಿಸಿ, ಶಾಲು ಹೊದಿಸಿ ಯೋಧರನ್ನು ಆತ್ಮೀಯವಾಗಿ ಬರಮಾಡಿಕೊಂಡ ಯುವಕರು ಬಳಿಕ ಬೈಕ್ ಜಾಥಾ ಮೂಲಕ ಜಯಘೋಷಗಳ ನಡುವೆ ಊರಿಗೆ ಕರೆತಂದು ಮತ್ತೊಮ್ಮೆ ಸನ್ಮಾನಿಸಿದರು. ಈ ವೇಳೆ ಹಳೆ ಸ್ನೇಹಿತ ಸಲಾವೊದ್ದಿನ್ ಮಾತನಾಡಿ, ಯೋಧರು ಗಾಳಿ, ಬಿಸಿಲು, ಮಳೆ ಎನ್ನದೆ ದೇಶದ ರಕ್ಷಣೆಗೆ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಶ್ರಮಿಸುತ್ತಾರೆ. ಅವರ ನಿವೃತ್ತ ಜೀವನ ಸುಖಕರವಾಗಿರಲಿ, ಸಾರ್ವಜನಿಕರು ಹಾಗೂ ದೇಶಭಕ್ತರು ಅವರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಬೇಕು ಎಂದರು.

ಗ್ರಾಮಸ್ಥರಿಂದ ಗೌರವ ಸ್ವೀಕರಿಸಿ ಮಾತನಾಡಿದ ರಾಜು ಕಾಳೆ, ದೇಶದ ಗಡಿಗಳಲ್ಲಿ 24 ವರ್ಷ ಸೇವೆ ಸಲ್ಲಿಸಿದ ನನಗೆ ಗ್ರಾಮಸ್ಥರು ತೋರಿದ ಪ್ರೀತಿ ಸಾಥ–ರ್ಕತೆ ತಂದಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಹೇಶ, ಸಂತೋಷ, ಸಂಜು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

# ಮಸ್ಕಿ ತಾಪಂ ಕಚೇರಿಯಲ್ಲಿ ಶಾಸಕ ಬಸನಗೌಡ ತುರುವಿಹಾಳ ಅಧ್ಯಕ್ಷತೆಯಲ್ಲಿ ಕುಡಿಯುವ ನೀರಿನ ಪಾಸ್ ಪೋರ್ಸ್ ಸಭೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನಲ್ಲಿ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚ–ರಿಕೆವಹಿಸಿ– ಶಾಸಕ ಆರ್.ಬಸನಗೌಡ**

**16–ಎಂ ಎಸ್ ಕೆ–01**

**ಮಸ್ಕಿ: ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರತಿಯೊಂದು ಗ್ರಾಮಗಳಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಗ್ರಾ.ಪಂ ಅಧಿಕಾ–ರಿಗಳು ಈಗಿನಿಂದಲೇ ನಿಗಾವಹಿಸಬೇಕು ಎಂದು ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಆರ್.ಬಸನಗೌಡ ತುರವಿಹಾಳ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.**

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸೋಮವಾರ ಕುಡಿಯುವ ನೀರು ನಿರ್ವಹಣೆ ಕು–ರಿತು ನಡೆದ ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಅವರು ಮಾತನಾಡಿದ ಅವರು, ಬೇಸಿಗೆ ದಿನಗಳಲ್ಲಿ ಗ್ರಾಮೀಣ ಭಾಗದ ಪ್ರತಿ ಹಳ್ಳಿಗಳಲ್ಲಿ ತಲೆದೂರುವ ಕುಡಿಯುವ ನೀರಿನ ಸಮಸ್ಯೆಗಳ ಕು–



ರಿತು ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾ–ರಿಗಳಿಂದ ಸಮಸ್ಯೆಗಳನ್ನು ಆಲಿಸಿ, ಕುಡಿಯುವ ನೀರಿನ ಯೋಜನೆ ಜೆಜೆಎಂ ಕಾಮಗಾರಿಗಳನ್ನು 2–3 ತಿಂಗಳ ಒಳಗಾಗಿ ಸಂಪೂರ್ಣ ಮುಗಿಸಬೇಕೆಂದರು. ಅರ್ಧಕ್ಕೆ ನಿಲ್ಲಿಸಿದ ಕಾಮಗಾರಿಗಳನ್ನು ಪಿಡಿಒಗಳ ಪರಿಶೀಲಿಸಿ ಕೂಡಲೇ ಆರಂಭಿಸುವಂತೆ ಗುತತ್ತಿಗೆದಾರರಿಗೆ ಸೂಚಿಸಬೇಕೆಂದರು. ಖಾಸಗಿ ಬೋರ್‌ವೆಲ್‌ನಿಂದ ನೀರು ಪಡೆಯುವುದನ್ನು ಕಡಿಮೆ ಮಾಡಲು, ಸಾರ್ವಜನಿಕ ಬೋರವೆಲ್‌ಗಳನ್ನು ದುರಸ್ತಿ ಮಾಡಿಸಬೇಕು.

15ನೇ ಹಣಕಾಸು ಯೋಜನೆಯ ಅನುದಾನವನ್ನು ಕುಡಿಯುವ ನೀರಿನ ಸಮಸ್ಯೆ ನಿರ್ವಹಣೆಗೆ ಬಳಸಿ, ಶುದ್ಧ ಕುಡಿಯುವ ನೀರಿನ ಘಟಕ ನಿರ್ವಹಣೆ ಅಚ್ಚುಕಟ್ಟಾಗಿ ನಿರ್ವಹಿಸಬೇಕು. ನೀರಿನ ಸಮಸ್ಯೆ ಇರುವ ಕಡೆಗಳಲ್ಲಿ ಪಂಚಾಯಿತಿಯಿಂದ ಬೋರ್‌ವೆಲ್‌ಗಳನ್ನು ಕೊರೆಯಿಸಿಕೊಳ್ಳಿ. ಅನುದಾನ ನೀಡಿದಾಗ ಪೈಪ್‌ಲೈನ್ ಅಳವಡಿಸಿಕೊಳ್ಳುವಂತೆ ಸೂಚಿಸಿದರು.

ಸಿದ್ಧತೆ ಮಾಡಿಕೊಳ್ಳಿ: ಮಾರ್ಚ್ ಕೊನೆಗೆ ಅಥವಾ ಏಪ್ರೀಲ್ ಮೊದಲ ವಾರದಲ್ಲಿ ಎಡದಂಡೆ ನಾಲೆಗೆ ಕುಡಿಯುವ ನೀರು ಹರಿಸಲಾಗುತ್ತದೆ. ಕ್ಷೇತ್ರದಲ್ಲಿ ಒಟ್ಟು 22 ಕೆರೆಗಳಿದ್ದು, ಕೆರೆಗಳನ್ನು ತುಂಬಿಸಿಕೊಳ್ಳಲು ಪೂರ್ವ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದರು. 4 ದಿನ ಸತತ ವಿದ್ಯುತ್ ಪೂರೈಸಿ: ಕುಡಿಯುವ ಸಲುವಾಗಿ ನಾಲೆಗೆ ನೀರು ಹರಿಸಿದಾಗ ಕೆಇಬಿ ಅಧಿಕಾರಿಗಳು ವಿದ್ಯುತ್ ಪೂರೈಸಲು ನೆಪಗಳನ್ನು ಹೇಳದಂತೆ ಸತತವಾಗಿ 4 ದಿನ ವಿದ್ಯುತ್ ಪೂರೈಸಲು ವ್ಯವಸ್ಥೆ ಮಾಡಿಕೊಳ್ಳಬೇಕೆಂದರು.

ಹಳ್ಳಹಿಡಿಸಿದ ಗುತ್ತಿಗೆದಾರರು: ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲಿ ಕುಡಿಯುವ ನೀರು ಪೂರೈಸಲು ಸರಕಾರದಿಂದ ಕೋಟ್ಯಾಂತರ ಹಣವನ್ನು ವ್ಯಯಿಸಿ ಜೆಜೆಎಂ ಯೋಜನೆಯಲ್ಲಿ ಕಾಮಗಾರಿಗಳನ್ನು ಆರಂಭಿಸಲಾಗಿದೆ. ಆದರೆ ಕಾಮಗಾರಿಗಳನ್ನು ಅಧಿಕಾರಿಗಳು ಗುತ್ತಿಗೆದಾರರು ಸೇರಿಕೊಂಡು ಯೋಜನೆ ಉದ್ದೇಶವನ್ನು ಹಳ್ಳ ಹಿಡಿಸಿದ್ದಾರೆಂದು ಬೇಸಾರ ವ್ಯಕ್ತಪಡಿಸಿದರು. ಸ್ವಚ್ಛವಾಗಿ ಇಟ್ಟುಕೊಳ್ಳಿ: ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಕಾರ್ಯಾ ವ್ಯಾಪ್ತಿಯ ಹಳ್ಳಿಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವಂತೆ ಕಿವಿ ಮಾತು ಹೇಳಿದರು. ಪಿಡಿಒಗಳು ಮನಸ್ಸು ಮಾಡಿದರೆ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳನ್ನು ತಿರಿಗಿ ನೋಡುವಂತೆ ಅಭಿವೃದ್ಧಿ ಮಾಡುವ ಅಧಿಕಾರವಿದೆ. ಬಳಕೆ ನೀರು ರಸ್ತೆ ಮೇಲೆ ಹರಿಯದಂತೆ ಹಿಂಗು ಗುಂಡಿಗಳನ್ನು ನಿರ್ಮಿಸಿಕೊಳ್ಳುವಂತೆ ಜಾಗೃತಿ ಮೂಡಿಸಬೇಕೆಂದರು.

ಸಮಸ್ಯೆಗಳಿದ್ದರೆ ತಿಳಿಸಿ: ಬೇಸಿಗೆಯಲ್ಲಿ ಕುಡಿಯುವ ನೀರು ಪೂರೈಸಲು ಕೆರೆಯಿಂದ ಅಥವಾ ಬೋರ್‌ವೆಲ್‌ಗಳಿಂದ ಪೈಪ್‌ಲೈನ್ ಅಳವಡಿಸಲು ಸೇರಿ ಇತರೆ ಸಮಸ್ಯೆಗಳಿದ್ದರೆ ಕೂಡಲೇ ಇಒ ಅವರ ಗಮನಕ್ಕೆ ತರಲು ಸೂಚಿಸಿದರು. ಈ ಸಂದರ್ಭದಲ್ಲಿ ತಾ.ಪಂ ಇಒ ಅಮರೇಶ ಯಾದವ, ತಹಸೀಲ್ದಾರ್ ಮಂಜುನಾಥ ಭೊಗಾವತಿ, ಸಾಹಯಕ ನಿರ್ದೇಶಕರು(ಪ.ರಾ.) ಸೋಮನಗೌಡ ಪಾಟೀಲ್, ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು, ಆರ್‌ಡಬ್ಲು ?ಯಎಸ್ ಇಲಾಖೆ ಅಧಿಕಾರಿಗಳು, ಟಿಎಲ್‌ಬಿಸಿ ಅಧಿಕಾರಿಗಳು, ಜೆಸ್ಕಾಂ ಅಧಿಕಾರಿಗಳು ಹಾಗೂ ಮಸ್ಕಿ, ಬಳಗಾನೂರು, ತುರವಿಹಾಳ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

# ಡೈರಿ ತಂತ್ರಜ್ಞಾನ ಡಿಪ್ಲೋಮ

ಡೈರಿ ತಂತ್ರಜ್ಞಾನದಲ್ಲಿ ಡಿಪ್ಲೊಮಾ (Diploma in Dairy Technology -DDT) ಒಂದು ವರ್ಷದ ತಾಂತ್ರಿಕ ಕೋರ್ಸ್ ಆಗಿದೆ. ಇದು ಹಾಲಿನ ಸಂಸ್ಕರಣೆ, ಉತ್ಪನ್ನಗಳ ತಯಾರಿಕೆ (ಮೊಸರು, ಬೆಣ್ಣೆ, ಚೀಸ್), ಗುಣಮಟ್ಟ ನಿಯಂತ್ರಣ ಮತ್ತು ಮಾರುಕಟ್ಟೆಯ ಬಗ್ಗೆ ಕಲಿಸುತ್ತದೆ. ಇದು ಡೈರಿ ಉದ್ಯಮದಲ್ಲಿ ಉದ್ಯೋಗ ಅಥವಾ ಸ್ವಯಂ ಉದ್ಯೋಗಕ್ಕೆ (entrepreneurship) ಅತ್ಯುತ್ತಮ ಅವಕಾಶಗಳನ್ನು ನೀಡುತ್ತದೆ. ಡೈರಿ ತಂತ್ರಜ್ಞಾನದಲ್ಲಿ ಡಿಪ್ಲೊಮಾವು ಡೈರಿ ಉದ್ಯಮದಲ್ಲಿ ಮೂಲಭೂತ ಜ್ಞಾನ ಮತ್ತು ಪ್ರಾಯೋಗಿಕ ಕೌಶಲ್ಯಗಳನ್ನು ಒದಗಿಸುತ್ತದೆ. ಈ ಕಾರ್ಯಕ್ರಮವು ಹಾಲು ಉತ್ಪಾದನೆ, ಸಂಸ್ಕರಣಾ ರಸಾಯನಶಾಸ್ತ್ರ, ಗುಣಮಟ್ಟ ನಿಯಂತ್ರಣ ಮತ್ತು ಡೈರಿ ಉತ್ಪನ್ನ ತಯಾರಿಕೆಯಂತಹ ವಿಷಯಗಳನ್ನು ಒಳಗೊಂಡಿದೆ. ವೃತ್ತಿಜೀವನದ ನಿರೀಕ್ಷೆಗಳು ಡೈರಿ ತಂತ್ರಜ್ಞಾನದಲ್ಲಿ ಡಿಪ್ಲೊಮಾ ಪಡೆದ ಪದವೀಧರರು ಡೈರಿ ಉದ್ಯಮದಲ್ಲಿ ವಿವಿಧ ಪಾತ್ರಗಳಿಗೆ ಸಜ್ಜಾಗಿರುತ್ತಾರೆ. ಇವುಗಳಲ್ಲಿ ಇವು ಸೇರಿವೆ: ಡಿಪ್ಲೊಮಾ ಇನ್ ಡೈರಿ ಟೆಕ್ನಾಲಜಿ ಕೋರ್ಸ್ ವಿವರಗಳು: ಅವಧಿ: ಸಾಮಾನ್ಯವಾಗಿ 1 ವರ್ಷ (ಕೆಲವು ಸಂಸ್ಥೆಗಳಲ್ಲಿ 2 ವರ್ಷಗಳು ಇರಬಹುದು). ಅರ್ಹತೆ: 10+2 (PUC)ಅಥವಾ ಪಿಯುಸಿ ಉತ್ತೀರ್ಣರಾದವರು, ಅಥವಾ ಜೀವಶಾಸ್ತ್ರ ಗುಂಪಿನೊಂದಿಗೆ ಉತ್ತೀರ್ಣರಾದವರು ಸೇರಬಹುದು. ಹಲವೆಡೆ 10ನೇ ತರಗತಿ ಪೂರ್ಣಗೊಳಿಸಿದವ–ರಿಗೂ ಅವಕಾಶವಿದೆ. ಕೋರ್ಸ್ ವಿಷಯಗಳು: ಶುದ್ಧ ಹಾಲು ಉತ್ಪಾದನೆ ಮತ್ತು ನಿರ್ವಹಣೆ. ಹಾಲಿನ ಸಂಸ್ಕರಣೆ ಮತ್ತು ಸಂರಕ್ಷಣೆ. ಪಾಶ್ಚಿಮಾತ್ಯ ಮತ್ತು ಸ್ಥಳೀಯ ಡೈರಿ ಉತ್ಪನ್ನಗಳ ತಯಾರಿಕೆ (ಚೀಸ್, ಬೆಣ್ಣೆ, ಐಸ್ ಕ್ರೀಮ್, ಮೊಸರು). ಹಾಲು ಮತ್ತು ಹಾಲಿನ ಉತ್ಪನ್ನಗಳ ಪರೀಕ್ಷೆ (ಗುಣಮಟ್ಟ ನಿಯಂತ್ರಣ). ಡೈರಿ ಫಾರ್ಮ್ ನಿರ್ವಹಣೆ ಮತ್ತು ಉದ್ಯಮಶೀಲತೆ. ಉದ್ಯೋಗಾವಕಾಶಗಳು: ಡೈರಿ ಸೂಪರ್‌ವೈಸರ್, ಪ್ರೊಡಕ್ಷನ್ ಆಫೀಸರ್, ಗುಣಮಟ್ಟ ನಿಯಂತ್ರಣ ಅಧಿಕಾರಿ, ಮತ್ತು ಸ್ವಂತ ಡೈರಿ ಫಾರ್ಮ್/ ಹಾಲು ಸಂಸ್ಕರಣಾ ಘಟಕ. ಮುಖ್ಯ ಸಂಸ್ಥೆಗಳು: IGNOU (ಇಗ್ನೋ), ವಿವಿಧ ಕೃಷಿ ವಿಶ್ವವಿದ್ಯಾಲಯಗಳು ಮತ್ತು ಸರ್ಕಾರಿ

# ಪಂಚ ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರಿಗೆ ತಲುಪಿವೆ: ಸಿ.ಎಸ್. ನಾಡಗೌಡ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ನಮ್ಮ ಸರ್ಕಾರದ ಸಾಧನೆಗಳು ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಪ್ರಯೋಜನವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಕಾಂಗ್ರೆಸ್ ಮುಂಚೂಣಿ ನಾಯಕರು ಮತ್ತು ಕಾರ್ಯಕರ್ತರು ಯಶಸ್ವಿಯಾಗಿದ್ದಾರೆ ಎಂದು ಶಾಸಕ ಹಾಗೂ ಕೆಎಸ್ಡಿಎಲ್ ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ ಹೇಳಿದರು.**

ಸೋಮವಾರ ಪಟ್ಟಣದ ತಮ್ಮ ನಿವಾಸದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ ಮತ್ತು ಅನ್ನಭಾಗ್ಯ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದು ಹೇಳಿದರು. ಟೀಕೆ–ಟಿಪ್ಪಣಿಗಳ ನಡುವೆಯೂ ಆರ್ಥಿಕವಾಗಿ ಹಿಂದುಳಿದವ–ರಿಗೆ ನೇರ ನೆರವು ನೀಡುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ ಎಂದು ತಿಳಿಸಿದರು. ನಮ್ಮ ಕ್ಷೇತ್ರದಲ್ಲಿ ಶೇ. 90ಕ್ಕೂ ಹೆಚ್ಚು




ಜನರು ಈ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದು, ವಿಶೇಷವಾಗಿ ಶೇ. 83ರಷ್ಟು ಮಹಿಳೆಯರು ಗೃಹಲಕ್ಷ್ಮಿ ಯೋಜನೆಯ ಲಾಭ ಪಡೆಯುತ್ತಿದ್ದಾರೆ ಎಂದು ಹೇಳಿದರು.

ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಅವರ ಟೀಕೆಗಳಿಗೆ ಪ್ರತಿಕ್ರಿಯಿಸಿದ ಅವರು, ಮುದ್ದೇಬಿಹಾಳ ಕ್ಷೇತ್ರಕ್ಕೆ ಅನುದಾನ ತಂದಿಲ್ಲ ಎಂಬ ಆರೋಪ ಸತ್ಯವಲ್ಲ ಎಂದು ಹೇಳಿದರು. ಕ್ಷೇತ್ರಕ್ಕೆ 700 ಕೋಟಿ ರೂಪಾಯಿಗೂ ಹೆಚ್ಚು ಅನುದಾನ ತರಲಾಗಿದೆ ಎಂದು ತಿಳಿಸಿದರು. ಹಿಂದಿನ ಆಡಳಿತದಲ್ಲಿ ಕುಟುಂಬಪರ

ಗುತ್ತಿಗೆ ಪದ್ಧತಿ ಇದ್ದರೂ ಈಗಿನ ಆಡಳಿತದಲ್ಲಿ ಅಂತಹ ಪದ್ಧತಿ ಇಲ್ಲ ಎಂದು ಹೇಳಿದರು. ಟೀಕೆ ಮಾಡುವುದನ್ನು ಬಿಟ್ಟು ನೈತಿಕ ರಾಜಕಾರಣ ಮಾಡಬೇಕು ಎಂದು ಕಿವಿಮಾತು ಹೇಳಿದರು. ಕೇಂದ್ರದ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಅವರು, ನರೇಗಾ ಯೋಜನೆಗೆ ಸಂಬಂಧಿಸಿದ ಕೂಲಿ ಪಾವತಿಯಲ್ಲಿ ವಿಳಂಬವಾಗುತ್ತಿದೆ ಎಂದು ಆರೋಪಿಸಿದರು.

ನೀರಾವರಿ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ ಕೇಂದ್ರದಿಂದ ಸಮರ್ಪಕ ಅನುದಾನ ಸಿಗುತ್ತಿಲ್ಲ ಎಂದು ಹೇಳಿದರು.

ತಮ್ಮ ರಾಜಕೀಯ ನಿವೃತ್ತಿ ಕುರಿತು ಹ–ರಿದಾಡುತ್ತಿರುವ ವದಂತಿಗಳಿಗೆ ಸ್ಪಷ್ಟನೆ ನೀಡಿದ ಅವರು, ಇದು ತಮ್ಮ ಕೊನೆಯ ಚುನಾವಣೆ ಎಂದು ಎಂದಿಗೂ ಹೇಳಿಲ್ಲ ಎಂದು ತಿಳಿಸಿದರು. ಕ್ಷೇತ್ರಗಳ ಪುನರ್ವಿಂಗಡಣೆ ಅಥವಾ ಮೀಸಲಾತಿ ಬದಲಾದರೆ ಮಾತ್ರ ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸುವ ಪ್ರಶ್ನೆ ಬರುತ್ತದೆ. ಜನರ ಪ್ರೀತಿ ಇರುವವರೆಗೂ ಚುನಾವಣಾ ರಾಜಕಾರಣದಲ್ಲಿ ಸಕ್ರಿಯವಾಗಿರುತ್ತೇನೆ ಎಂದು ಹೇಳಿದರು.

ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಎಲ್ಲಾ ಶಾಸಕರು ಒಗ್ಗಟ್ಟಾಗಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಡಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಮಹೆಬೂಬು ಗೊಳಸಂಗಿ, ಸಿ.ಬಿ. ಅಸ್ಕಿ, ಬಿ.ಕೆ. ಬಿರಾದಾರ, ವಾಯ್.ಹೆಚ್. ವಿಜಯಕರ, ಬಾಪುರಾವು ದೇಸಾಯಿ, ಶ್ರೀಕಾಂತ್ ಚಲವಾದಿ, ಮುತ್ತಣ್ಣ ಮಸೂತಿ, ಸಂತೋಷ ಚವ್ಹಾಣ ಸೇ–ರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

# ಗೋಕರ್ಣ ಮಹಾಬಲೇಶ್ವರ: ಶಿವರಾತ್ರಿ ನಿಮಿತ್ತ ಡಾ. ಪ್ರಭಾಕರ್ ಕೋರೆ ದರ್ಶನ*



ನೈಜ್ಯ ದೆಸೆ ನ್ಯೂಸ್

**ಗೋಕರ್ಣ 15 ಫೆಬ್ರವರಿ: ಶಿವರಾತ್ರಿ ಭಾರತೀಯ ಪರಂಪರೆಯ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಶಿವನ ಆರಾಧನೆ ಮೂಲಕ ಆತ್ಮಶಾಂತಿಯನ್ನ ಹೊಂದುವುದು ಶಿವರಾತ್ರಿಯ ವೈಶಿಷ್ಟ ವಾಗಿದೆ. ಅದರಲ್ಲಿಯೂ ಗೋಕರ್ಣ ಅನಾದಿ ಕಾಲದಿಂದಲೂ ಶೈವ ಪರಂಪರೆಯ ಮಹತ್ವ ಕೇಂದ್ರವಾಗಿದ್ದು ಶಿವ ಭಕ್ತಿಗೆ ವ್ಯಾಖ್ಯಾನವಾಗಿದೆ ಎಂದು ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ ಪ್ರಭಾಕರ ಕೋರೆ ಅವರು ಹೇಳಿದರು.**

ಅವರು ಗೋಕರ್ಣದಲ್ಲಿ ಮಹಾಬಲೇಶ್ವರ ಆತ್ಮಲಿಂಗದ ದರ್ಶನ ಮಾಡಿಕೊಂಡು ಸುದ್ದಿಗಾರರೊಂದಿಗೆ ಮಾತನಾಡಿದರು. ನನ್ನ ತಂದೆಯವರ ಕಾಲ ದಿಂದಲೂ ಇಂದಿಗೂ ಪ್ರತಿ ವರ್ಷ ಗೋಕರ್ಣಕ್ಕೆ ಬಂದು ಶಿವ ದರ್ಶನವನ್ನು ಮಾಡಿಕೊಂಡು ಪೂಜೆಯನ್ನು ಸಲ್ಲಿಸುತ್ತೇವೆ. ಇಲ್ಲಿ ಬಂದರೆ ಮನಸ್ಸಿಗೆ ನೆಮ್ಮದಿ ಹಾಗೂ ಆನಂದವನ್ನು ನೀಡುತ್ತದೆ. ಶಿವ ಭಕ್ತಿಯ ಪಾರಮ್ಯದಿಂದಲೇ ಅಂಕಲಿಯಲ್ಲಿ ಅದ್ಭುತವಾದ ಶಿವಮಂದಿರವನ್ನು ನಿರ್ಮಾಣ ಮಾಡಲಾಗಿದ್ದು ವಿಶೇಷ.

ಇಂಥ ಪರಮಾತ್ಮನ ಧ್ಯಾನವು ಜೀವನಕ್ಕೆ ಶಕ್ತಿ ಹಾಗೂ ಸಮಾಧಾನವನ್ನು ಕರುಣಿಸುತ್ತದೆ. ಗೋಕರ್ಣ ದರ್ಶನ ನನಗೆ ಪ್ರತಿಸಲ ಹೊಸ ಅನುಭೂತಿಯನ್ನು ನೀಡುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಶ್ರೀಕಾಂತ್ ವಿರ್ಗಿ, ಅನಿಲ್ ಬಾಗಿ, ಭರತ ಭಣವನೆ, ಅಜಿತ ದೇಸಾಯಿ, ವಿಜಯ್ ಜಾದವ್, ಅಶೋಕ್ ಘೋರ್ಪಡೆ , ಸುರೇಶ್ ಪಾಟೀಲ್ ಹಾಗೂ ದೇವಾಲಯ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

## ದೇಶಾದ್ಯಂತ ಸಂಚಲನ ಮೂಡಿಸಿದ್ದ 400 ಕೋಟಿ ದರೋಡೆ ನಡೆದಿರುವುದೇ ಸುಳ್ಳಂತೆ.!

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ದೇಶವನ್ನೇ ಬೆಚ್ಚಿ ಬೀಳಿಸಿದ್ದ 400 ಕೋಟಿ ಹಣ ದರೋಡೆ ಪ್ರಕರಣಕ್ಕೆ ರೋಚಕ ತಿರುವು ಪಡೆದುಕೊಂಡಿದ್ದು, ಹಣ ದರೋಡೆಯಾಗಿರುವುದಕ್ಕೆ ಈತನಕ ಯಾವುದೇ ಸಾಕ್ಷ್ಯ ಲಭ್ಯವಾಗಿಲ್ಲ. ಇದು ಕಟ್ಟುಕಥೆ ಎಂಬುವುದು ಮಹಾರಾಷ್ಟ್ರ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.**



ಕರ್ನಾಟಕ– ಗೋವಾ ಗಡಿಯಲ್ಲಿ ಕಳೆದ ಅ.25 ರಂದು 400 ಕೋಟಿ ಹಣ ದರೋಡೆ ನಡೆದಿದೆ ಎಂಬುವುದೇ ಸುಳ್ಳು ಎಂಬುವುದು ದೃಢಪಟ್ಟಿದೆ.ಅಂದು ಬೆಳಗಾವಿ ಸಮೀಪದ ಗಡಿ ಪ್ರದೇಶದಲ್ಲಿ ಹಣ ಸಾಗಿಸುತ್ತಿದ್ದ ಎರಡು ಕಂಟೈನರ್‌ಗಳನ್ನು ದರೋಡೆ ಮಾಡಲಾಗಿದೆ ಎಂದು ವ್ಯಕ್ತಿಯೊಬ್ಬರು ದೂರು ನೀಡಿದ್ದರು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ದೂರಿನ ಆಧಾರದ ಮೇಲೆ ಮಹಾರಾಷ್ಟ್ರ ಸರ್ಕಾರ ತನಿಖೆಗೆ ಎಸ್‌ಐಟಿ ರಚಿಸಿತ್ತು.ಎಸ್‌ಐಟಿ ಪೊಲೀಸರು ಸತತವಾಗಿ ಕಾರ್ಯಾಚರಣೆ ಕೈಗೊಂಡು ಹಲವು ಮಾಹಿತಿಗಳನ್ನು ಕಲೆ ಹಾಕಿದರಾದರೂ ಬೆಳಗಾವಿಯ ಖಾನಾಪುರ ತಾಲ್ಲೂಕಿನ ಚೋರ್ಲಾಘಾಟ್ ಬಳಿ ಇಷ್ಟೊಂದು ಭಾರಿ ಮೊತ್ತದ ಹಣ ದರೋಡೆಯಾಗಿರುವ ಬಗ್ಗೆ ಯಾವುದೇ ಕುರುಹು ಸಿಗಲಿಲ್ಲ. ದೂರು ನೀಡಿದ್ದ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸಿದಾಗ ಆತ ನೀಡಿದ ಹೇಳಿಕೆಗೂ ದರೋಡೆ ನಡೆದ ಸ್ಥಳಕ್ಕೂ ಯಾವುದೇ ಸಾಮ್ಯತೆ ಕಂಡು ಬಂದಿಲ್ಲ. ಅಲ್ಲದೇ ಆತನ ಕರೆ ವಿವರಗಳನ್ನು ಪರಿಶೀಲಿಸಿದರಾದರೂ ಯಾವುದೇ ಮಾಹಿತಿ ಲಭ್ಯವಾಗಲಿಲ್ಲ.ಹಾಗಾಗಿ ಚೋರ್ಲಾಘಾಟ್‌ನಲ್ಲಿ ಹಣ ದರೋಡೆ ನಡೆದಿದೆ ಎಂಬುವುದು ಸುಳ್ಳು ಎಂಬ ದೃಢನಿರ್ಧಾರಕ್ಕೆ ಎಸ್‌ಐಟಿ ಬಂದಿದೆ. ಈ ಪ್ರಕರಣ ಕರ್ನಾಟಕ–ಮಹಾರಾಷ್ಟ್ರ ರಾಜ್ಯಗಳಲ್ಲಿ ದೊಡ್ಡ ಸಂಚಲನವನ್ನೇ ಮೂಡಿಸಿತ್ತು. ಇದೀಗ ಪ್ರಕರಣದಲ್ಲಿ ಬಂಧಿತರಾಗಿರುವ ಆರೋಪಿಗಳನ್ನು ಸಾಕ್ಷಿಗಳ ಕೊರತೆ ಹಿನ್ನಲೆಯಲ್ಲಿ ಬಿಡುಗಡೆ ಮಾಡುವ ಸಾಧ್ಯತೆ ಇದೆ. ಎಸ್‌ಐಟಿ ಪೊಲೀಸರು ಪಾರದರ್ಶಕವಾಗಿ ತನಿಖೆ ನಡೆಸುತ್ತಿಲ್ಲ. ಪ್ರಕರಣಕ್ಕೆ ಸಂಬಂಧಿಸಿದ ಆಡಿಯೋ ದಾಖಲೆಗಳು ನನ್ನ ಬಳಿ ಇವೆ. ಆ ದಾಖಲೆಗಳ ಆಧ–ಾರದಲ್ಲಿ ಮರು ತನಿಖೆ ನಡೆಸಬೇಕೆಂದು ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಸಂದೀಪ್ ದತ್ತಾ ಪಾಟೀಲ್ ಒತ್ತಾಯಿಸಿದ್ದಾರೆ. ಘಟನೆ ವಿವರ: ಬೆಳಗಾವಿಯ ಚೋರ್ಲಾಘಾಟ್ ಪ್ರದೇಶದಲ್ಲಿ ಕಳೆದ ಅ.25 ರಂದು ಮಹಾರಾಷ್ಟ್ರದ ನಾಸಿಕ್ ಮೂಲದ ಉದ್ಯಮಿ ಸಂದೀಪ್ ದತ್ತಾ ಪಾಟೀಲ್ ಎಂಬಾತ 400 ಕೋಟಿ ಹಣ ದರೋಡೆಯಾಗಿದೆ ಎಂದು ಮಹಾರಾಷ್ಟ್ರ ಪೊಲೀಸರಿಗೆ ದೂರು ನೀಡಿದ್ದರು.

# ಬಿಜೆಪಿ ಶಾಸಕ ಬೈರತಿ ಬಸವರಾಜ್ 7 ದಿನ ಸಿಐಡಿ ಕಸ್ಟಡಿಗೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಭಾರತೀನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವನ ಹತ್ಯೆ ಪ್ರಕರಣದ 5ನೇ ಆರೋಪಿಯಾಗಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರನ್ನು 7 ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿ 42ನೇ ಎಸಿಜೆಎಂ ಕೋರ್ಟ್ ?ನ್ಯಾಯಾಧೀಶರು ಭಾನುವಾರ ಆದೇಶಿಸಿದ್ದಾರೆ.**

ನಗರದ 42ನೇ ಎಸಿಜೆ–ಎಂ ನ್ಯಾಯಾಲಯದ ನ್ಯಾಯಾಧೀಶರ ಕೋರಮಂಗಲದ ನಿವಾಸಕ್ಕೆ ಭಾನುವಾರ ಬೈರತಿ ಬಸವರಾಜ್ ಅವರನ್ನು ಹಾಜರುಪಡಿಸಲಾಗಿತ್ತು. ಈ ವೇಳೆ ಪ್ರಕರಣದ ತನಿಖಾಧಿಕಾರಿ ಡಿವೈಎಸ್‌ಪಿ



ಗೌತಮ್ ಅವರು ಶಾಸಕರ ಆಂಜಿಯೋಗ್ರಾಮ್ ವರದಿಯನ್ನು ನ್ಯಾಯಾಧೀಶರ ಮುಂದೆ ಸಲ್ಲಿಸಿದರು. ವರದಿ ಪರಿಶೀಲಿಸಿ ವಿಚಾರಣೆ ನಡೆಸಿದ ನ್ಯಾಯಾಧೀಶರು, ಬೈರತಿ ಬಸವರಾಜ್ ಅವರನ್ನು ಸಿಐಡಿ ಕಸ್ಟಡಿಗೆ ನೀಡಿ ಆದೇಶ ಹೊರಡಿಸಿದ್ದಾರೆ. ಕಳೆದ ಜುಲೈ 15ರಂದು ಬೆಂಗಳೂರಿನ ಹಲಸೂರು ಕೆರೆಯ ಸಮೀಪದ ಮನೆಯೊಂದರ ಎದುರು ರಾತ್ರಿ ರೌಡಿಶೀಟರ್ ಬಿಕ್ಲು ಶಿವ ಅಲಿಯಾಸ್ ಶಿವಪ್ರಕಾಶ್ ಕೊಲೆ ನಡೆದಿತ್ತು. ಕಾರಿನಲ್ಲಿ ಬಂದಿದ್ದ 8–9 ಜನ ದುಷ್ಕರ್ಮಿಗಳು ಶಿವಪ್ರಕಾಶ್‌ನನ್ನು ಮಾರಕಾಸ್ತ್ರಗಳಿಂದ ಹೊಡೆದು ಹತ್ಯೆ ಮಾಡಿ ಸ್ಥಳದಿಂದ ಪರಾರಿಯಾಗಿದ್ದರು.

ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಕೊಲೆ ನಡೆದಿದೆ ಎಂದು ಆರೋಪಿಸಿ ಶಿವಪ್ರಕಾಶ್ ತಾಯಿ ವಿಜಯಲಕ್ಷ್ಮಿ ನೀಡಿದ ದೂರಿನ ಮೇರೆಗೆ ಜಗದೀಶ್, ಕಿರಣ್, ವಿಮಲ್, ಅನಿಲ್ ಮತ್ತು ಬೈರತಿ ಬಸವರಾಜ್, ಇತರರ ವಿರುದ್ಧ ಭಾರತೀನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬಂಧನ ಭೀತಿ ಎದುರಿಸುತ್ತಿದ್ದ ಶಾಸಕ ಬೈರತಿ ಬಸವರಾಜ್? ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಪೀಠ, ಅರ್ಜಿ ವಜಾಗೊಳಿಸಿ, ವಿಚಾರಣಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿತ್ತು.

ಬಳಿಕ ವಿಚಾರಣಾ ನ್ಯಾಯಾಲಯವೂ ಕೂಡ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಿತ್ತು. ಇದರಿಂದಾಗಿ, ನಿರೀಕ್ಷಣಾ ಜಾಮೀನು ನೀಡಲು ನಿರಾಕರಿಸಿದ್ದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಬೈರತಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಕಳೆದ ಗುರುವಾರ ಸುಪ್ರೀಂ ಕೋರ್ಟ್ ಕೂಡ ಅವರ ಅರ್ಜಿಯನ್ನು ವಜಾಗೊಳಿಸಿ, ಹೈಕೋರ್ಟ್? ಆದೇಶವನ್ನು ಎತ್ತಿಹಿಡಿದಿತ್ತು. ಫೆಬ್ರವರಿ 12ರಂದು ಅಹಮದಾಬಾದ್‌ನಿಂದ ಬೆಂಗಳೂರಿಗೆ ಬಂದಿಳಿಯುತ್ತಿದ್ದಂತೆ ಪೊಲೀಸರು ವಶಕ್ಕೆ ಪಡೆದು ಸಿಐಡಿ ಸುಪರ್ದಿಗೆ ಒಪ್ಪಿಸಿದ್ದರು.

# ಜಂತರ ಮಂತರದಲ್ಲಿ ಜೇವರ್ಗಿ ಹೋರಾಟಗಾರರ ಧರ್ಜನೆ ಮಹಾಬೋಧಿ ಮಹಾವಿಹಾರ ಬೌದ್ಧರಿಗೆ ಒಪ್ಪಿಸಲು ಆಗ್ರಹ

ನೈಜ್ಯ ದೆಸೆ ನ್ಯೂಸ್

**ಜೇವರ್ಗಿ:** ಮಹಾಬೋಧಿ ಮಹಾವಿಹಾರವನ್ನು ಸಂಪೂರ್ಣವಾಗಿ ಬೌದ್ಧ ಸಮುದಾಯಕ್ಕೆ ಹಸ್ತಾಂತ–ರಿಸಬೇಕು ಹಾಗೂ 1949ರ ಕಾಯ್ದೆಯನ್ನು ರದ್ದುಗೊಳಿಸಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಜೇವರ್ಗಿ ತಾಲ್ಲೂಕಿನ ಯಡ್ರಾಮಿ ಭಾಗದ ಹೋರಾಟಗಾರರು ದೆಹಲಿಯ ಜಂತರ ಮಂತರದಲ್ಲಿ ಧರ್ಜನೆ ನಡೆಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದವರು ಕೇಂದ್ರ ಸರ್ಕಾರ ಹಾಗೂ ಬಿಹಾರ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. 1949ರ ಕಾಯ್ದೆ ಮಹಾಬೋಧಿ ಮಹಾವಿಹಾರದ ಆಡಳಿತದಲ್ಲಿ ಬೌದ್ಧರ ಹಕ್ಕುಗಳನ್ನು ಸೀಮಿತಗೊಳಿಸುತ್ತಿದ್ದು, ಅದನ್ನು ರದ್ದುಗೊಳಿಸಿ ಪವಿತ್ರ ಕ್ಷೇತ್ರವನ್ನು ಸಂಪೂರ್ಣವಾಗಿ ಬೌದ್ಧ ಸಮುದಾಯಕ್ಕೆ ಒಪ್ಪಿಸಬೇಕು



ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಚಂದ್ರಶೇಖರ

ಹರನಾಳ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿದ್ದರಾಮ ಕಟ್ಟಿ, ಶ್ರೀಹರಿ ಕರಕಿಹಳ್ಳಿ,

ಮಾಪಣ್ಣ ಕಟ್ಟಿ, ಸಿದ್ದು ಕೆರೂರ್, ರವಿ ಕುಳಗೇರಿ, ವರದಿಗಾರ ಮರೆಪ್ಪ ಬೇಗಾರ್, ಶರಣು ಬಡಿಗೇರ್, ಮಿಲಿಂದ ಸಾಗರ, ಯಶ್ವಂತ ಬಡಿಗೇರ್, ಗುಂಡಪ್ಪ ಜಡಗಿ, ಮಲ್ಲಿನಾಥ್ ಹೆಗ್ಗಡೆ, ರವಿ ಸರಕಾರ,

ಶ್ರೀನಾಥ ಕಟ್ಟಿಸಂಗಾವಿ, ಸುಭಾಸ್ ಕೊಬ್ಬಿನ, ಜುಮ್ಮಣ್ಣ ದೇವಿಂದ್ರ ಮುದವಾಳ, ಶಿವಶರಣಪ್ಪ ಮಾರಡಗಿ, ಗುರುಲಿಂಗಪ್ಪ, ಧರ್ಮಣ್ಣ ಮಾವನೂರ್, ರಾಜು ಹಾಲಗಡ್ಲ, ಶ್ರೀಮಂತ ಕಿಲ್ಲೇದಾರ, ಶರಣಬಸಪ್ಪ ಲಕಣಪುರ, ಬಲರಾಮ ಹರನೂರ, ತಿಪ್ಪಣ್ಣ ಅಣಬಿ, ಜನತಾ ಕಾಲೋನಿ ಪರಶುರಾಮ ನಡಗಟ್ಟಿ, ರೇವಣ್ಣಸಿದ್ದ ಬೀರಾಳ, ಮಲ್ಲು ಬಡಿಗೇರ್, ಮಳ್ಳಿ ಹಣಮಂತ ಟೇಲರ್, ಸಂಗಣ್ಣ ಗವ್ಹಾರ ಸೇ–ರಿದಂತೆ ಅನೇಕರು ಭಾಗವಹಿಸಿದ್ದರು. ತಮ್ಮ ಬೇಡಿಕೆ ಈಡೇರಿಸುವವರೆಗೆ ಹೋರಾಟ ಮುಂದುವ–ರಿಸುವುದಾಗಿ ಹೋರಾಟಗಾರರು ಎಚ್ಚರಿಕೆ ನೀಡಿದರು.

# ನಾಗೋಲಿ ಶ್ರೀಹನುಮಯ್ಯ ತಾತನವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಿದ ರಥೋತ್ಸವ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಮಲ್ಲೇದೇವರ ಗುಡ್ಡ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿಬರುವ ನಾಗೋಲಿ ಗ್ರಾಮದ ಶ್ರೀಹ ನುಮಯ್ಯತಾತನವರ ಜಾತ್ರಾಮಹೋತ್ಸವ ಶಿವರಾತ್ರಿಯ ದಿನದಂದು ಪ್ರತಿವರ್ಷದಂತೆ ಜಾತ್ರಾ ಮಹೋತ್ಸವ ಕಾರ್ಯಕ್ರಮವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸೋಮವಾರ ಸಂಜೆ ಸಂಭ್ರಮದಿಂದ ಉತ್ಸವ ಹಾಗೂ ರಥೋತ್ಸವ ಜರುಗಿತು. ನಾಗೋಲಿ ಗ್ರಾಮದ ಶ್ರೀ ಹನುಮಯ್ಯತಾತನವರ ಜಾತ್ರಾ ಮಹೋತ್ಸವ ಅಂಗವಾಗಿ ಉದಯ 5 ಗಂಟೆಯಿಂದ 10 ಗಂಟೆಗೆಯವರೆಗೆ ಶ್ರೀ ಲಿಂ|| ಹನುಮಯ್ಯ ತಾತನವರ ಕರ್ತೃ ಗದ್ದುಗೆ ಅಭಿಷೇಕ ಪತ್ರಿ ಪುಷ್ಪಾರ್ಚನೆ,**

ವಿಶೇಷಪೂಜೆ ಅಲಂಕಾರ ಮಾಡಿ ಮಂಗಳಾರತಿ,ತೀರ್ಥ ಪ್ರಸಾದ ನಂತರ 12.30 ಗಂಟೆಗೆ ಮುತ್ತೈದೆಯರ ಕಳಸ ಕನ್ನಡಿ ಭಾಜಾ



ಭಜಂತ್ರಿಯೊಂದಿಗೆ ನಂದಿಕೋಲ ಸೇವೆ ಜರುಗಿತು.ಬೆಳಿಗ್ಗೆ 10 ಗಂಟೆಯಿಂದ ದೇವ–

ರಿಗೆ ವಿಶೇಷಪೂಜೆ ಕಾರ್ಯಕ್ರಮ ನಡೆದವು ಭಕ್ತರು ದೇವರಿಗೆ ಕಾಯಿ ಕರ್ಪೂರ ನೈವ್ಯದೆ

ಸಲ್ಲಿಸಿ ದರ್ಶನಪಡೆದರು. ಸಂಜೆಯಾಗುತ್ತಿದ್ದಂತೆ ಭಕ್ತರು ಶ್ರೀಹನುಮಯ್ಯತಾತನವರ ದೇವಸ್ಥಾನಕ್ಕೆ ಆಗಮಿಸಿದರು. ಜಾತ್ರೆ ಎಂದ ಮೇಲೆ ಅಲ್ಲೊಂದು ರಥೋತ್ಸವವೂ ಇರುವುದು ವಿಶೇಷವೇನೂ ಇಲ್ಲ ಆದರೆ ನಾಗೋಲಿ ಗ್ರಾಮದ ಶ್ರೀ ಹನುಮಯ್ಯತಾತನವರ ಜಾತ್ರಾ ಮಹೋತ್ಸವದಲ್ಲಿ ಉಚ್ಚಾಯ ಮಹೋತ್ಸವದ ನೇತೃತ್ವವಹಿಸುವುದು ಮಹಿಳೆಯರು ಎಂಬುವದು ವಿಶೇಷವಾಗಿತ್ತು.

ಚನ್ನಬಸವ ತಾತನವರು ಸಂಜೆ 6ಗಂಟೆಗೆ ಮಹಿಳೆಯರಿಂದ ಉಚ್ಚಾಯ ಮಹೋತ್ಸವ ಜರುಗಿತು ನಂತರ ರಥೋತ್ಸವಕ್ಕೆ ಚಾಲನೆ ಸಿಗುತ್ತಿದ್ದಂತೆ ಭಕ್ತರು ರಥೋತ್ಸವಕ್ಕೆ ಬಾಳೆ,ಹಣ್ಣು ಉತ್ತುತ್ತಿ ಎಸೆದು ಭಕ್ತಿಭಾವ ಮೆರೆದರು. ರಥೋತ್ಸವ ಮುಂದೆವಿವಿಧ ವಾದ್ಯಮೇಳಗಳು ಗಮನಸೆಳೆಯಿತು, ರಥೋತ್ಸವ ಸ್ಥಳಕ್ಕೆ ಬಂದು ನಿಂತಾಗ ಭಕ್ತರು ಚಪ್ಪಾಳೆ ತಟ್ಟಿ ಹರ್ಷವ್ಯಕ್ತಪಡಿಸಿದರು. ಸಂದರ್ಭದಲ್ಲಿ ಸ್ಥಳಿಯ ಗ್ರಾಮದ ಮುಖಂಡರು ಜನಪ್ರತಿನಿಧಿಗಳು ದೂರದ ರಾಜ್ಯದ ಆಂಧ್ರ,ಮಹಾರಾಷ್ಟ್ರ ಸೇರಿದಂತೆ ರಾಯಚೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸಾವಿರಾರು ಜನ ಭಕ್ತಾಧಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಚನ್ನಬಸವತಾತ, ಮಾಹಾಮುನಿತಾತ, ನಾಗವೀರಯ್ಯಸ್ವಾಮಿ ,ಸೋಮನಾಥಸ್ವಾಮಿ, ನಾಗೇಶಸ್ವಾಮಿ ಚನ್ನಬಸವನಾಯಕ ನಿವೃತ್ತ ಬ್ಯಾಂಕ್ ಅಧಿಕಾರಿ, ಪಂಪನಗೌಡ, ಪ್ರಭಣ್ಣಗೌಡ, ಹನುಮಯ್ಯ ಅಬಕಾರಿ,ಶಾಂತಪ್ಪಬಾಗ್ಲಿ, ಮುದಕಪ್ಪಬಾಗ್ಲಿ ಮಹಾದೇವ ಅಬಕಾರಿ, ಮುದಿರಂಗಪ್ಪನಾಯಕ, ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಜಾತ್ರಾ ಮಹೋತ್ಸವವದಲ್ಲಿ ಪಾಲುಗೊಂಡ ಭಕ್ತಾಧಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತು.ನಾಗೋಲಿ ಗ್ರಾಮದ ಹನುಮಯ್ಯತಾತನವರ ಜಾತ್ರಾಮಹೋತ್ಸವ ಅಂಗವಾಗಿ ಉಚ್ಚಾಯವನ್ನುಮಹಿಳೆಯರು ಎಳೆದರು.